# ಬಿ-ರೈಡ್








# 3ನೇ ವಾರ್ಷಿಕ ವರದಿ 2023-24

## ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಬಿ-ರೈಡ್)

ಬೆಂಗಳೂರು ಉಪನಗರ ರೈಲು ಯೋಜನೆ

बेंगलूरु सबर्बन रेल योजना

KEEP IT RAIL

**ಮೇದರಹಳ್ಳಿ ನಿಲ್ದಾಣ**



**ಶೆಟ್ಟಿಹಳ್ಳಿ ನಿಲ್ದಾಣ**



**ಚಿಕ್ಕಬಾಣಾವರ ನಿಲ್ದಾಣ**



B RIDE

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಬಿ–ರೈಡ್)

## 3ನೇ ವಾರ್ಷಿಕ ವರದಿ 2023-24

## ಪರಿವಿಡಿ


| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1. | ನಿರ್ದೇಶಕರ ಮಂಡಳಿ | 3 |
| 2. | ಸೂಚನೆ | 4 |
| 3. | ನಿರ್ದೇಶಕರ ವರದಿ | 8 - 12 |
| 4. | ಲೆಕ್ಕ ಪರಿಶೋಧಕರ ವರದಿ | 13 - 22 |
| 5. | ಆಯವ್ಯಯ ಪಟ್ಟಿ | 23 |
| 6. | ಲಾಭ ಮತ್ತು ನಷ್ಟ ಹೇಳಿಕೆ | 24 |
| 6. | ನಗದು ಹರವಿನ ಹೇಳಿಕೆ | 25 |
| 7. | ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು ಹಾಗೂ ಗಮನಾರ್ಹ ಲೆಕ್ಕಪತ್ರ ನೀತಿಗಳು | 26-34 |
| 8. | ಸಿಎಜಿ ಹೇಳಿಕೆಗಳು | 35 |


**ನೋಂದಾಯಿತ ಕಚೇರಿ**


ಸಂಪರ್ಕ ಸೌಧ, ಮೊದಲನೇ ಮಹಡಿ, ಸರ್ವೆ ಸಂಖ್ಯೆ 8 (ಬಿ.ಇ.ಪಿ. ಆವರಣ)
ಒರಾಯಿನ್ ಮಾಲ್ ಎದುರು, ರಾಜ್ ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು–560010

B RIDE

## ಮಂಡಳಿಯ ನಿರ್ದೇಶಕರು

| | |
|---|---|
| **ಡಾ. ಶಾಲಿನಿ ರಜನೀಶ್,** ಐಎಎಸ್: | ಅಧ್ಯಕ್ಷರು |
| **ಡಾ. ಮಂಜುಳಾ ಎನ್,** ಐಎಎಸ್: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀ. ಮಹೇಶ್ವರ ರಾವ್ ಎಂ,** ಐಐಎಸ್: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀ. ಮಹಮ್ಮದ್ ಇಕ್ರಮುಲ್ಲಾ ಷರೀಫ್,** ಐಎಎಸ್: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀ. ಧನಂಜಯ ಸಿಂಗ್,** ಐಆರ್‌ಎಸ್‌ಇ: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀಮತಿ. ದೀಪಾ ಕೊಟ್ನಿಸ್,** ಐಆರ್‌ಎಸ್‌ಇ: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀ. ಆಶುತೋಷ್ ಮಾಥುರ್,** ಐಆರ್‌ಎಎಸ್: | ನಾಮನಿರ್ದೇಶಿತ ನಿರ್ದೇಶಕರು |
| **ಶ್ರೀ. ರಾಜೇಶ್ ಕುಮಾರ್ ಸಿಂಗ್,** ಐಆರ್‌ಎಸ್‌ಇ: | ನಿರ್ದೇಶಕರು |
| **ಶ್ರೀ. ಅವಧೇಶ್ ಮೆಹ್ತಾ,** ಸಿಎ, ಐಸಿಡಬ್ಲ್ಯೂಎ, ಸಿಪಿಎ: | ನಿರ್ದೇಶಕರು |

## ಶಾಸನಬದ್ಧ ಲೆಕ್ಕಪರಿಶೋಧಕರು

**ಮೆ॥ ನಾಗಾ ಮತ್ತು ಅಸೋಸಿಯೇಟ್ಸ್**

ಬೆಂಗಳೂರು

## ಬ್ಯಾಂಕರ್ಸ್: ಕೆನರಾ ಬ್ಯಾಂಕ್

**ಪ್ರೈಮ್ ಕಾರ್ಪೋರೇಟ್ ಬ್ರ್ಯಾಂಚ್**

**ಬೆಂಗಳೂರು – 560 001**

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ

## ಷೇರುದಾರರಿಗೆ ಸೂಚನಾಪತ್ರ

**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತದ ಷೇರುದಾರರ 3ನೇ ವಾರ್ಷಿಕ ಪ್ರಧಾನ ಸಭೆಯನ್ನು21ನೇ ಡಿಸೆಂಬರ್ 2024ರಂದು (ಶನಿವಾರ) 12:30 ಗಂಟೆಗೆ ಕೋಣೆ ಸಂಖ್ಯೆ 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 560001ರಲ್ಲಿ ಈ ಕೆಳಕಂಡ ವ್ಯವಹಾರಗಳನ್ನು ನಡೆಸುವ ಸಲುವಾಗಿ ಜಾರಿ ಮಾಡುತ್ತಿರುವ ಸೂಚನಾಪತ್ರ.**

**ಸಾಮಾನ್ಯ ವ್ಯವಹಾರ**

1. **ಹಣಕಾಸು ಹೇಳಿಕೆಗಳ ಅಳವಡಿಕೆ:** 01.04.2023 ರಿಂದ 31.03.2024ರ ವರೆಗಿನ ಅವಧಿಯ ಕಂಪನಿಯ ಹಣಕಾಸು ಹೇಳಿಕೆಗಳು ಮತ್ತು ನಿರ್ದೇಶಕರ ಮಂಡಳಿಯ (ಮಂಡಳಿ) ಮತ್ತು ಲೆಕ್ಕ ಪರಿಶೋಧಕರ ವರದಿಗಳ ಜೊತೆಗೆ ಕಂಪನಿಗಳ ಕಾಯ್ದೆ, 2013 ರ ಪರಿಚ್ಛೇದ 143ರ ಅಡಿಯಲ್ಲಿ ಭಾರತದ ನಿಯಂತ್ರಕರು ಹಾಗೂ ಮಹಾಲೆಕ್ಕಪರಿಶೋಧಕರಿಂದ ಪಡೆದ ಟೀಕೆಗಳು.
2. **ನಿಯಂತ್ರಕರು ಮತ್ತು ಭಾರತದ ಮಹಾ ಲೆಕ್ಕಪರಿಶೋಧಕರಿಂದ (ಸಿಎಜಿಐ):** ನೇಮಿಸಲ್ಪಡುವ ಶಾಸನಬದ್ಧ ಲೆಕ್ಕ ಪರಿಶೋಧಕರಿಗೆ ಮಾರ್ಚ್ 31, 2024 ರಂದು ಕೊನೆಗೊಳ್ಳುವ ವಿತ್ತೀಯ ವರ್ಷದ ಸಂಭಾವನೆಯನ್ನು ನಿಗದಿಪಡಿಸುವುದನ್ನು ವಿವೇಚಿಸಲು ಮತ್ತು ಸರಿ ಎನಿಸಿದ್ದಲ್ಲಿ, ಮಾರ್ಪಾಡುರಹಿತವಾಗಿ ಅಥವಾ ಸಹಿತವಾಗಿ, ಈ ಕೆಳಕಂಡ ನಿರ್ಣಯಗಳನ್ನು ಒಂದು ಸಾಮಾನ್ಯ ನಿರ್ಣಯವಾಗಿ ಜಾರಿಗೆ ತರುವುದು:

**"ನಿರ್ಣಯವಾಗುವುದೆಂದರೆ"** ಭಾರತದ ನಿಯಂತ್ರಕರು ಹಾಗೂ ಮಹಾ ಲೆಕ್ಕಪರಿಶೋಧಕರು, ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ 139 (5) ರ ಅಡಿಯಲ್ಲಿ ನೇಮಕ ಮಾಡುವ ಶಾಸನಬ್ಧ ಲೆಕ್ಕ ಪರಿಶೋಧಕರಿಗೆ ವಿತ್ತೀಯ ವರ್ಷ 2023–24 ಕ್ಕೆ ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿಯ ಕಾಯ್ದೆ 2013ರ ಪರಿಚ್ಛೇದ 142(1) ಅನುಗುಣವಾಗಿ ಸ್ವತಂತ್ರ ಶಾಸನಬದ್ಧ ಲೆಕ್ಕ ಪರಿಶೋಧಕರ ಸಂಭಾವನೆ ಮತ್ತು ಪಾಕೆಟ್ ವೆಚ್ಚಗಳು, ಶಾಸನಬದ್ಧ ತೆರಿಗೆಗಳು ಮತ್ತು ಇತರೆ ಸಹಾಯಕ ವೆಚ್ಚಗಳನ್ನು ನಿಗದಿಪಡಿಸಲು ಈ ಮೂಲಕ ಅಧಿಕಾರವನ್ನು ಹೊಂದಿದೆ. ಅದಕ್ಕೆ ಸಮ್ಮತಿಸಿ ಅದನ್ನು ದಾಖಲಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ
**ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಬಿ–ರೈಡ್ ಪರವಾಗಿ)**

**ಸಹಿ/–**
**ಅವಧೇಶ್ ಮೆಹ್ತಾ**
**ನಿರ್ದೇಶಕರು/ ಬಿಡಿ & ಎಫ್**

ಸ್ಥಳ: ಬೆಂಗಳೂರು
**ದಿನಾಂಕ: 21/12/2024**

**ಟಿಪ್ಪಣಿಗಳು:**

1. ಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸಲು ಹಕ್ಕು ಇರುವ ಸದಸ್ಯನಿಗೆ ತನ್ನ ಪರವಾಗಿ ಪ್ರತಿನಿಧಿಯೊಬ್ಬನನ್ನು ನೇಮಿಸುವ ಹಕ್ಕು ಇರುತ್ತದೆ. ಪ್ರತಿನಿಧಿಯು ಕಂಪನಿಯ ಸದಸ್ಯ ಆಗಬೇಕೆಂದೇನಿಲ್ಲ. ಲಗತ್ತಿಸಿರುವ ಪ್ರತಿನಿಧಿ ಪತ್ರವನ್ನು ಕಂಪನಿಯ ನೊಂದಾಯಿತ ಕಚೇರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಗಿಂತ ಕನಿಷ್ಠ 48 ಗಂಟೆಗಳ ಮುಂಚೆ ಕಡ್ಡಾಯವಾಗಿ ತಲುಪಿಸಬೇಕು.
2. ಕಂಪನಿಯು ಸರ್ಕಾರಿ ಕಂಪನಿಯಾದ್ದರಿಂದ ನಿಯಂತ್ರಕರು ಮತ್ತು ಭಾರತದ ನಿಯಂತ್ರಕರು ಹಾಗೂ ಮಹಾಲೆಕ್ಕಪರಿಶೋಧಕರು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ–139 (5)ರ ಅಡಿಯಲ್ಲಿ ವಿತ್ತೀಯ ವರ್ಷ 2023–24 ಕ್ಕೆ ಸಂಬಂಧಿತವಾಗಿ ಕಂಪನಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗುವುದು.
3. ಮಾರ್ಗಸೂಚಿ ಭೂಪಟವನ್ನು ಲಗತ್ತಿಸಲಾಗಿದೆ.
4. ಕಂಪನಿಗಳ ಕಾಯ್ದೆ. 2013ರ ಪರಿಚ್ಛೇದ–170ರ ಅಡಿಯಲ್ಲಿ ನಿರ್ವಹಿಸಿರುವ ಕಂಪನಿಯ ನಿರ್ದೇಶಕರು, ಪ್ರಮುಖ ಸಿಬ್ಬಂದಿ ಮತ್ತು ಅವರುಗಳ ಷೇರು ಹಿಡುವಳಿಗಳನ್ನೊಳಗೊಂಡ ಕಡತವು (ರಿಜಿಸ್ಟರ್), ಸರ್ವಸದಸ್ಯರ ಸಭೆಯ ಸದಸ್ಯರ ಅವಗಾಹನೆಗಾಗಿ ಲಭ್ಯವಿರುತ್ತದೆ.

# ಹಾಜರಾತಿ ಪತ್ರ

## 3ನೇ ವಾರ್ಷಿಕ ಮುಖ್ಯ ಸಭೆಯು 21ನೇ ಡಿಸೆಂಬರ್ (ಶನಿವಾರ) 2024ರಂದು ನಡೆಯಿತು

**ಹೆಸರು:**

**ವಿಳಾಸ:**

ನಾನು, ಮೆ॥ ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಉದ್ಯಮ ನಿಯಮಿತ (ಬಿ–ರೈಡ್)ದ ನೋಂದಾಯಿತ ಶೇರ್‌ಹೋಲ್ಡರ್/ಪರ್ಯಾಯ ಸದಸ್ಯನಾಗಿದ್ದೇನೆ ಎಂಬುದಾಗಿ ನಾನು ಈ ಮೂಲಕ ಸ್ಪಷ್ಟಪಡಿಸುತ್ತೇನೆ. ಕಂಪನಿಯ 3ನೇ ವಾರ್ಷಿಕ ಮುಖ್ಯ ಸಭೆ ದಿನಾಂಕ 21ನೇ ಡಿಸೆಂಬರ್ (ಶನಿವಾರ) 2024ರಂದು, ನಾನು ಉಪಸ್ಥಿತನಾಗಿರುವುದನ್ನು ದೃಢಪಡಿಸುತ್ತಿದ್ದೇನೆ.

**ಫಸ್ಟ್/ಸೋಲ್ ಹೋಲ್ಡರ್/ಪರ್ಯಾಯ ಸದಸ್ಯ** **ಸೆಕೆಂಡ್ ಹೋಲ್ಡರ್/ಪರ್ಯಾಯ ಸದಸ್ಯ**

**ಟಿಪ್ಪಣಿ:** ಹಾಜರಾತಿ ಪತ್ರದಲ್ಲಿ ಸಂಪೂರ್ಣ ಹೆಸರು, ವಿಳಾಸ ಬರೆದು, ಪತ್ರದ ಮೇಲೆ ಸಹಿ ಮಾಡಿದ ಬಳಿಕ ಸಭೆಗೆ ಹಾಜರಾಗುವ ಮೊದಲು ಪ್ರವೇಶ ದ್ವಾರದಲ್ಲಿ ನೀಡಬೇಕು.

# ಅರ್ಜಿ ಸಂಖ್ಯೆ ಎಂಜಿಟಿ–11

## ಪರ್ಯಾಯ ಅರ್ಜಿ

(ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 105 (6) ಹಾಗೂ ಕಂಪನಿಗಳ
(ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ಅನುಸಾರ)

**CIN: U60230KA2021SGC142876**

ಕಂಪನಿ ಹೆಸರು : ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

ನೋಂದಾಯಿತ ಕಚೇರಿ : ಸಂಪರ್ಕ ಸೌಧ, ಮೊದಲನೇ ಮಹಡಿ, ಸರ್ವೆ ನಂ.8, (ಬಿ.ಇ.ಪಿ ಆವರಣ), ಒರಾಯನ್ ಮಾಲ್ ಎದುರು, ಡಾ.ರಾಜಕುಮಾರ್ ರಸ್ತೆ, ರಾಜಾಜಿನಗರ ಫಸ್ಟ್ ಬ್ಲಾಕ್, ಬೆಂಗಳೂರು–560010

| | |
|---|---|
| ಸದಸ್ಯರ ಹೆಸರು | : |
| ನೋಂದಾಯಿತ ವಿಳಾಸ | : |
| ಇ–ಮೇಲ್ | : |
| ಫೋಲಿಯೊ ನಂ./ ಕ್ಲೈಂಟ್ ಐಡಿ | : |
| ಡಿಪಿ ಐಡಿ: | : |

ನಾನು, ಮೇಲೆ ಉಲ್ಲೇಖಿಸಿದ ಕಂಪನಿಯ ....... ಈಕ್ವಿಟಿ ಷೇರ್‌ನ ಸದಸ್ಯನಾಗಿ, ಈ ಕೆಳಗಿನವರನ್ನು ನೇಮಿಸುತ್ತೇನೆ

1. ಹೆಸರು : ..........................................................................
   ವಿಳಾಸ : ..........................................................................
   ಇ–ಮೇಲ್ ಐಡಿ : ..........................................................................

ಸಹಿ:..........................................

2. ಹೆಸರು : ..........................................................................
   ವಿಳಾಸ : ..........................................................................
   ಇ–ಮೇಲ್ ಐಡಿ : ..........................................................................

ಸಹಿ:..........................................

3. ಹೆಸರು : ..........................................................................
   ವಿಳಾಸ : ..........................................................................
   ಇ–ಮೇಲ್ ಐಡಿ : ..........................................................................

ಸಹಿ:..........................................

3ನೇ ವಾರ್ಷಿಕ ಮುಖ್ಯ ಸಭೆಯು 21ನೇ ಡಿಸೆಂಬರ್ 2024ರಂದು ಕೋಣೆ ಸಂಖ್ಯೆ 313, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು 560001ರಲ್ಲಿ ನಡೆಯಲಿದ್ದು, ನನ್ನ ಪರವಾಗಿ ಪರ್ಯಾಯ ವ್ಯಕ್ತಿಯು ಹಾಜರಾಗಲಿದ್ದು, ಮತವನ್ನೂ ಚಲಾಯಿಸಲಿದ್ದಾರೆ. ಯಾವುದೇ ಮುಂದೂಡಿಕೆಯಾದರೆ ಅಂತಹ ಸಂದರ್ಭಗಳ ನಿರ್ಣಯಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ:

**ನಿರ್ಣಯದ ಸಂಖ್ಯೆ: 1–2**

**ಸಹಿ ಮಾಡಲಾದ ದಿನಾಂಕ..... 20...**

ರೆವೆನ್ಯೂ ಸ್ಟಾಂಪ್ ಅಂಟಿಸುವುದು

**ಶೇರ್‌ಹೋಲ್ಡರ್ ಸಹಿ** **ಪರ್ಯಾಯ ವ್ಯಕ್ತಿಯ ಸಹಿ**

**ಟಿಪ್ಪಣಿ:** ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಈ ಪರ್ಯಾಯ ಅರ್ಜಿಯನ್ನು ಸಭೆ ಆರಂಭವಾಗುವ 48 ಗಂಟೆಗಳ ಮೊದಲು ಸಲ್ಲಿಸಬೇಕಾಗಿರುವುದು ಕಡ್ಡಾಯವಾಗಿದೆ.

---

## ಸಭೆ ನಡೆಯುವ ಸ್ಥಳ




**ವಿಳಾಸ:**
ರೂಂ ನಂ. 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು –560001

**ಲ್ಯಾಂಡ್‌ಮಾರ್ಕ್ಸ್: ವಿಕಾಸಸೌಧದ ಪಕ್ಕ**

# ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

## ಷೇರುದಾರರಿಗೆ ನಿರ್ದೇಶಕರ ವರದಿ

**ಗೆ,**

**ಸದಸ್ಯರಿಗೆ**

**ನಿರ್ದೇಶಕರ ವರದಿ**

(ಕಂಪನಿಗಳ ಕಾಯ್ದೆ 2013ರ ಕಾಯ್ದೆ ಸೆಕ್ಷನ್ 134 ಹಾಗೂ ಕಂಪನಿಗಳ (ಖಾತೆಗಳು) ನಿಯಮಗಳು 2014ರ ಅನುಸಾರ)

2024ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ನಷ್ಟ ಹಾಗೂ ಲಾಭದ ಕುರಿತ ಲೆಕ್ಕಪರಿಶೋಧನೆಯೊಂದಿಗೆ ನಿಮ್ಮ ನಿರ್ದೇಶಕರು 3ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿಮ್ಮ ನಿರ್ದೇಶಕರಿಗೆ ಸಂತಸವಿದೆ. ಲೆಕ್ಕಪರಿಶೋಧಕರ ವರದಿಯಲ್ಲಿ ಬ್ಯಾಲೆನ್ಸ್ ಶೀಟ್ ಹಾಗೂ ಕ್ಯಾಶ್ ಫ್ಲೋ ಸ್ಟೇಟ್‌ಮೆಂಟ್ ಕೂಡ ಇದೆ.

### 1. ಹಣಕಾಸು ಫಲಿತಾಂಶಗಳು

2024ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ಫಲಿತಾಂಶಗಳ ಸಂಕ್ಷಿಪ್ತ ಮಾಹಿತಿ ಇಂತಿದೆ.

(000 ರೂಪಾಯಿಗಳಲ್ಲಿ)

| ವಿವರಗಳು | ಪ್ರಸಕ್ತ ಹಣಕಾಸು ವರ್ಷ (31.03.2024) | ಹಿಂದಿನ ಹಣಕಾಸು ವರ್ಷ (31.03.2023) |
|---|---|---|
| **ಕಾರ್ಯಾಚರಣೆಗಳಿಂದ ಬಂದ ಆದಾಯ** | ಶೂನ್ಯ | ಶೂನ್ಯ |
| **ಇತರೆ ಆದಾಯ:** | | |
| ಬ್ಯಾಂಕ್ ಠೇವಣಿಗಳಿಂದ ಲಭಿಸಿದ ಆದಾಯ | ಶೂನ್ಯ | ಶೂನ್ಯ |
| ಆದಾಯ ತೆರಿಗೆ ಮರುಪಾವತಿ ಮೇಲಿನ ಬಡ್ಡಿ | ಶೂನ್ಯ | ಶೂನ್ಯ |
| ಇತರೆ ವಿವಿಧ ಆದಾಯ | ಶೂನ್ಯ | ಶೂನ್ಯ |
| **ಒಟ್ಟು ಆದಾಯ** | ಶೂನ್ಯ | ಶೂನ್ಯ |
| ಕಡಿಮೆ: ಒಟ್ಟು ವೆಚ್ಚಗಳು | 138.95 | 148.53 |
| : ಹಿಂದಿನ ಅವಧಿಯ ಬಾಬ್ತುಗಳು | ಶೂನ್ಯ | ಶೂನ್ಯ |
| **ತೆರಿಗೆ ಮುಂಚಿನ ಲಾಭ/ನಷ್ಟ** | (138.95) | (148.53) |
| **ಕಡಿಮೆ: ತೆರಿಗೆ ನಿಬಂಧನೆ** | ಶೂನ್ಯ | ಶೂನ್ಯ |
| **ತೆರಿಗೆ ನಂತರ ಲಾಭ/ನಷ್ಟ** | (138.95) | (148.53) |
| **ಸೇರಿಸಿ: ಮುಂದಿನ ಲಾಭಾಂಶ** | (217.27) | (68.75) |
| **ಸೇರಿಸಿ: ಹಿಂದಿನ ಅವಧಿಯ ಹೊಂದಾಣಿಕೆ** | ಶೂನ್ಯ | ಶೂನ್ಯ |
| **ಆಯವ್ಯಯ ಪಟ್ಟಿಗೆ ಸಾಗಿಸಿದ ಲಾಭ/ನಷ್ಟ** | (356.23) | (217.27) |

### 2. ಕಂಪನಿ ಕುರಿತು ಸಾಮಾನ್ಯ ಮಾಹಿತಿ

ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಭಾರತದ ಕರ್ನಾಟಕ ರಾಜ್ಯದಲ್ಲಿ 2021ರ ಜನವರಿ 6ರಂದು ಕಂಪನಿಗಳ ಕಾಯ್ದೆ 2013ರ ಪ್ರಕಾರ ಇದನ್ನು ಕಂಪನಿ ಎಂಬುದಾಗಿ ಪರಿಗಣಿಸಲಾಗಿದೆ. ಕಂಪನಿಯ ನೋಂದಣಿ ಕಚೇರಿಯು ಬೆಂಗಳೂರಿನಲ್ಲಿದೆ)

ಕಂಪನಿಯು ಸಂಪೂರ್ಣವಾಗಿ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್–ಕ–ರೈಡ್‌ನ ಸ್ವಾಮ್ಯಕ್ಕೆ ಒಳಪಡುತ್ತದೆ. ಕ–ರೈಡ್ ಒಂದು ಪ್ರಮುಖ ಸಂಸ್ಥೆಯಾಗಿದ್ದು, ರೈಲು ಯೋಜನೆಗಳ ಸಮರ್ಪಕ ಜಾರಿ, ಸಮನ್ವಯ ಸಾಧಿಸುವುದು, ಯೋಜನೆಗಳ ಅನುಷ್ಠಾನವನ್ನು ದೃಢಪಡಿಸಿಕೊಂಡು ಕರ್ನಾಟಕ ಸರ್ಕಾರಕ್ಕೆ ವರದಿ ಸಲ್ಲಿಸುವ ಜವಾಬ್ದಾರಿಯನ್ನು ನಿಭಾಯಿಸುತ್ತದೆ.

ಕಂಪನಿಯನ್ನು ಕೆ–ರೈಡ್‌ನಿಂದ (ನೋಡಲ್ ಏಜೆನ್ಸಿ) ಎಸ್‌ಪಿವಿ ಎಂಬುದಾಗಿ ಗುರುತಿಸಲಾಗಿದ್ದು, ಕರ್ನಾಟಕದ ಬೆಂಗಳೂರಿನಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಗಳನ್ನು ಜಾರಿಗೊಳಿಸುವ ದಿಸೆಯಲ್ಲಿ ಸ್ಥಾಪಿಸಲಾಗಿದೆ.

**3. ಹಣಕಾಸು ಪ್ರಕಟಣೆಯ ದಿನಾಂಕದ ನಂತರದ ಚಟುವಟಿಕೆಗಳು, ಯಾವುದಾದರೂ ಇದ್ದರೆ:**

ಹಣಕಾಸು ಪ್ರಕಟಣೆಯ ದಿನಾಂಕದ ನಂತರ ಯಾವುದೇ ಚಟುವಟಿಕೆಗಳನ್ನು ಕೈಗೊಂಡಿಲ್ಲ.

**4. ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದಾದರೂ ಬದಲಾವಣೆ ಆಗಿದ್ದರೆ:**

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ಅಧೀನದಲ್ಲಿ ಕಂಪನಿಯನ್ನು ಎಸ್‌ಪಿವಿ ಎಂಬುದಾಗಿ ಹೊಸದಾಗಿ ಸ್ಥಾಪಿಸಲಾಗಿದ್ದು, ಬೆಂಗಳೂರು ಉಪನಗರ ರೈಲು ಯೋಜನೆಗಳನ್ನು (ಬಿಎಸ್‌ಆರ್‌ಪಿ) ಜಾರಿಗೊಳಿಸುವ ಉದ್ದೇಶ ಹೊಂದಿದೆ. ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

**5. ಲಾಭಾಂಶ**

ಕಂಪನಿಯು ಇನ್ನೂ ಕಾರ್ಯಾಚರಣೆ ಆರಂಭಿಸದ ಕಾರಣ ಮಂಡಳಿಯ ನಿರ್ದೇಶಕರು ಯಾವುದೇ ಡಿವಿಡೆಂಡ್ ಶಿಫಾರಸು ಮಾಡಿಲ್ಲ.

**6. ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 134 (3) (ಜೆ) ಪ್ರಕಾರ ಮೀಸಲು ಹಣದ ವರ್ಗಾವಣೆ**

ಕಂಪನಿಯು ಇದುವರೆಗೆ ಕಾರ್ಯಾಚರಣೆ ಆರಂಭಿಸದ ಕಾರಣ ಯಾವುದೇ ಲಾಭ ಗಳಿಸಿಲ್ಲ. ಹಾಗಾಗಿ, 2024ರ ಮಾರ್ಚ್ 31ಕ್ಕೆ ಅಂತ್ಯವಾದ ಹಣಕಾಸು ವರ್ಷದಲ್ಲಿ ಜನರಲ್ ರಿಸರ್ವ್ ಅಕೌಂಟ್‌ಗೆ ಯಾವುದೇ ಹಣವನ್ನು ವರ್ಗಾವಣೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

**7. ಷೇರು ಬಂಡವಾಳ**

ಕಂಪನಿಯ ಷೇರು ಬಂಡವಾಳವು 10 ಲಕ್ಷ ರೂ. ಆಗಿದ್ದು, ಒಂದು ಷೇರಿಗೆ 10 ರೂ.ನಂತೆ 1 ಲಕ್ಷ ಷೇರುಗಳನ್ನಾಗಿ ವಿಂಗಡಿಸಲಾಗಿದೆ.

**8. ಡಿಫ್ರೆನ್ಷಿಯಲ್ ರೈಟ್ಸ್‌ನೊಂದಿಗೆ ಈಕ್ವಿಟಿ ಷೇರುಗಳನ್ನು ಹೊರಡಿಸಿರುವುದನ್ನು ಬಹಿರಂಗಗೊಳಿಸುವುದು**

ಹಣಕಾಸು ವರ್ಷದಲ್ಲಿ ಕಂಪನಿಯು ಡಿಫ್ರೆನ್ಷಿಯಲ್ ರೈಟ್ಸ್‌ನೊಂದಿಗೆ ಯಾವುದೇ ಈಕ್ವಿಟಿ ಷೇರುಗಳನ್ನು ಹೊರಡಿಸಿಲ್ಲ

**9. ಎಂಪ್ಲಾಯೀಸ್ ಸ್ಟಾಕ್ ಆಪ್ಶನ್ಸ್ ಹೊರಡಿಸಿರುವುದನ್ನು ಬಹಿರಂಗಗೊಳಿಸುವುದು**

ಹಣಕಾಸು ವರ್ಷದಲ್ಲಿ ಕಂಪನಿಯು ಯಾವುದೇ ಎಂಪ್ಲಾಯೀಸ್ ಸ್ಟಾಕ್ ಆಪ್ಶನ್ಸ್ ಯೋಜನೆ ಜಾರಿಗೆ ತಂದಿಲ್ಲ

**10. ಸ್ವೇಟ್ ಈಕ್ವಿಟಿ ಷೇರುಗಳ ಕುರಿತಂತೆ ಮಾಹಿತಿ ಬಹಿರಂಗಪಡಿಸುವುದು**

ಹಣಕಾಸು ವರ್ಷದಲ್ಲಿ ಕಂಪನಿಯು ಸ್ವೇಟ್ ಈಕ್ವಿಟಿ ಷೇರುಗಳನ್ನು ಹೊರಡಿಸಿಲ್ಲ.

**11. ವ್ಯವಹಾರದ ಪ್ರಕ್ರಿಯೆಯಲ್ಲಿ ಬದಲಾವಣೆ:**

2024ರ ಮಾರ್ಚ್ 31ಕ್ಕೆ ಅಂತ್ಯವಾದ ಹಣಕಾಸು ವರ್ಷದಲ್ಲಿ ಕಂಪನಿಯು ವ್ಯವಹಾರದ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ

**12. ಠೇವಣಿಗಳು:**

ಹಣಕಾಸು ವರ್ಷದಲ್ಲಿ ಕಂಪನಿಯು ಯಾವುದೇ ರೀತಿಯಾದ ಠೇವಣಿಗಳನ್ನು ಸ್ವೀಕರಿಸಿಲ್ಲ ಹಾಗೂ ಠೇವಣಿ ನವೀಕರಣ ಮಾಡಿಲ್ಲ

**13. ನಿಯಂತ್ರಕರು ಅಥವಾ ಕೋರ್ಟ್‌ಗಳು ಅಥವಾ ನ್ಯಾಯಾಧೀಕರಣಗಳಿಂದ ಪ್ರಮುಖ ಆರ್ಡರ್‌ಗಳ ಕುರಿತು ಮಾಹಿತಿ**

ನಿಯಂತ್ರಕರು, ಕೋರ್ಟ್‌ಗಳು ಹಾಗೂ ನ್ಯಾಯಾಧೀಕರಣಗಳಿಂದ ಪ್ರಮುಖ ಮಟೀರಿಯಲ್ ಆರ್ಡರ್‌ಗಳ ಕುರಿತು ಆದೇಶ ಹೊರಡಿಸಿಲ್ಲ. ಕಂಪನಿಯ ಭವಿಷ್ಯದ ಕಾರ್ಯಾಚರಣೆ ಕುರಿತು ಕೂಡ ಆದೇಶಗಳನ್ನು ಹೊರಡಿಸಿಲ್ಲ.

**14. ಆಂತರಿಕ ಹಣಕಾಸು ನಿಯಂತ್ರಣದ ಕುರಿತು ಸಮರ್ಪಕತೆ:**

ಹಣಕಾಸು ಹಾಗೂ ಕಾರ್ಯಾಚರಣೆಗಳ ಮೇಲೆ ನಿಗಾ ಇರಿಸುವುದು, ಸಂಪನ್ಮೂಲಗಳ ಸುರಕ್ಷತೆ, ವಿಶ್ವಾಸಾರ್ಹತೆಯನ್ನು ಕಾಪಾಡಲು ಕಂಪನಿಯು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ.

**15. ವಾರ್ಷಿಕ ಲಾಭ**

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 92 (3) ಹಾಗೂ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು–2014ರ 12 (1) ನಿಯಮದ ಅನುಸಾರ ಕಂಪನಿಯ ವಾರ್ಷಿಕ ಲಾಭದ ಕುರಿತ ಪ್ರತಿಯನ್ನು ಎಂಜಿಟಿ–7ರಲ್ಲಿ ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅದರ ಲಿಂಕ್ ಈ ಕೆಳಗಿನಂತಿದೆ.

https://kride.in/b-ride-annual-report-2023-24

## 16. ಮಂಡಳಿ ಸಭೆಗಳು, ನಿರ್ದೇಶಕರ ಸಮಿತಿಗಳು

ಎ) ಮಂಡಳಿ ಸಭೆಗಳು, ಸಮಿತಿ ಸಭೆಗಳ ಸಂಖ್ಯೆಗಳು ಮತ್ತು ದಿನಾಂಕಗಳು ಹಾಗೂ ಪ್ರತೀ ನಿರ್ದೇಶಕರು ಭಾಗವಹಿಸಿದ ಸಭೆಗಳ ಸಂಖ್ಯೆಗಳು

ಹಣಕಾಸು ವರ್ಷದಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ನಾಲ್ಕು ಸಭೆಗಳನ್ನು ನಡೆಸಿದ್ದು, ದಿನಾಂಕಗಳು ಕೆಳಗಿನಂತಿವೆ:

1. 27.06.2023 2. 16.10.2023 3. 07.02.2024 4. 02.03.2024

ಕಂಪನಿಗಳ ಕಾಯ್ದೆ 2013ರಲ್ಲಿ ಪ್ರಸ್ತಾಪಿಸಿರುವಂತೆ ಎರಡು ಸಭೆಗಳ ನಡುವಿನ ಅಂತರ ಕಾಪಾಡಿಕೊಳ್ಳಲಾಗಿದೆ.

**ಸದಸ್ಯರ ಹಾಜರಾತಿ ಕುರಿತ ಮಾಹಿತಿ ಕೆಳಗಿನಂತಿದೆ:**

| ಹೆಸರು | ಹುದ್ದೆ | ವರ್ಗ | 01.04.2023ರಿಂದ 31.03.2024ರ ಅವಧಿಯಲ್ಲಿ ನಡೆದ ಸಭೆಗಳು | |
|---|---|---|---|---|
| | | | ನಡೆದ ಸಭೆಗಳು | ಹಾಜರಾತಿ |
| ಶ್ರೀಮತಿ ವಂದಿತಾ ಶರ್ಮಾ | ಅಧ್ಯಕ್ಷರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 2 |
| ಡಾ. ರಜನೀಶ್ ಗೋಯಲ್ | ಅಧ್ಯಕ್ಷರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 2 |
| ಡಾ. ಮಂಜುಳಾ ಎನ್. | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 2 |
| ಶ್ರೀ ಗೌರವ್ ಗುಪ್ತಾ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 2 | 2 |
| ಶ್ರೀ ಅಜಿತ್ ಕುಮಾರ್ ಝಾ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 1 | 1 |
| ಶ್ರೀ ಆಷುತೋಶ್ ಮಾಥುರ್ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 4 | 4 |
| ಶ್ರೀಮತಿ ದೀಪಾ ಕೊಟ್ನಿಸ್ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 3 |
| ಶ್ರೀ ಅಂಜುಮ್ ಪರ್ವೇಜ್ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 3 | 1 |
| ಶ್ರೀ ಮೊಹಮ್ಮದ್ ಇಕ್ರಾಮುಲ್ಲಾ ಶರೀಫ್ | ಸದಸ್ಯರು | ಕಾರ್ಯನಿರ್ವಾಹಕವಲ್ಲದ ಮತ್ತು ನಾಮನಿರ್ದೇಶಿತ ನಿರ್ದೇಶಕರು | 4 | 1 |
| ಶ್ರೀ ಆರ್.ಕೆ.ಸಿಂಗ್ | ಸದಸ್ಯರು | ಕಾರ್ಯನಿರ್ವಾಹಕರು ಮತ್ತು ನಾಮನಿರ್ದೇಶಕರು | 4 | 4 |
| ಶ್ರೀ ಅವಧೇಶ್ ಮೆಹ್ತಾ | ಸದಸ್ಯರು | ಕಾರ್ಯನಿರ್ವಾಹಕರು ಮತ್ತು ನಾಮನಿರ್ದೇಶಕರು | 4 | 4 |
| ಶ್ರೀ ಧನಂಜಯ ಸಿಂಗ್ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕ | 3 | 2 |
| ಶ್ರೀ ಆನಂದ್ ಭಾರ್ತಿ | ಸದಸ್ಯರು | ಕಾರ್ಯನಿರ್ವಾಹಕೇತರ ಮತ್ತು ನಾಮನಿರ್ದೇಶಿತ ನಿರ್ದೇಶಕ | 1 | 1 |

ಎ) **ಕೆಎಂಪಿ ನೇಮಕಾತಿ**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವರದಿ ವೇಳೆ ಯಾವುದೇ ವ್ಯಕ್ತಿಯನ್ನು ಕೆಎಂಪಿಯನ್ನಾಗಿ ನೇಮಕ ಮಾಡಿಲ್ಲ.

ಬಿ) **ಮಂಡಳಿಯ ಮೌಲ್ಯಮಾಪನ**

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 134ರ ಉಪವಿಭಾಗ (3)ರ ಕಾಲಂ (ಪಿ) ಪ್ರಕಾರ ಹಾಗೂ ಕಂಪನಿಗಳ (ಖಾತೆಗಳು) ನಿಯಮಗಳು 2014ರ 8ನೇ ನಿಯಮದ ಉಪನಿಯಮ 4ರ ಅನ್ವಯ ಸರ್ಕಾರಿ ಕಂಪನಿಗಳಿಗೆ ಮಂಡಳಿಯ ಮೌಲ್ಯಮಾಪನದಿಂದ ವಿನಾಯಿತಿ ನೀಡಲಾಗಿದೆ.

ಸಿ) **ನಿರ್ದೇಶಕರ ಘೋಷಣೆ**

ಹಣಕಾಸು ವರ್ಷದಲ್ಲಿ ಎಲ್ಲಾ ಮಂಡಳಿಯ ಸಭೆಗಳ ಸೂಚನೆಗಳನ್ನು ಕಂಪನಿಯ ಎಲ್ಲಾ ನಿರ್ದೇಶಕರಿಗೆ ಸರಿಯಾಗಿ ನೀಡಲಾಗಿದೆ.

ಕಂಪನಿಗಳ ಕಾಯ್ದೆ 2013ರ ಪ್ರಕಾರ ಮಂಡಳಿಯ ಸಭೆಗಳನ್ನು ನಡೆಸಲಾಗಿದೆ. ಹಾಗೆಯೇ, ಮಂಡಳಿಯ ಸಭೆಗಳ ಮಿನಿಟ್ಸ್ ಸಿದ್ಧಪಡಿಸಿ ನಿರ್ವಹಿಸಲಾಗಿದೆ.

ಕಂಪನಿಗಳ ಕಾಯ್ದೆ, 2013ರ ನಿಬಂಧನೆಗಳ ಪ್ರಕಾರ ಕಂಪನಿಯು ಎಲ್ಲಾ ಅನ್ವಯವಾಗುವ ರಿಜಿಸ್ಟರ್‌ಗಳು/ದಾಖಲೆಗಳನ್ನು ನಿರ್ವಹಿಸಿದೆ ಮತ್ತು ನಿಗದಿತ ಸಮಯದೊಳಗೆ ನಮೂದು ಮಾಡಿದೆ.

## 17. ಕಾರ್ಯದರ್ಶಿ ಮಾನದಂಡಗಳು

ಅನ್ವಯವಾಗುವ ಎಲ್ಲಾ ಕಾರ್ಯದರ್ಶಿ ಮಾನದಂಡಗಳ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕರು ಸರಿಯಾದ ವ್ಯವಸ್ಥೆ ರೂಪಿಸಿದ್ದಾರೆ. ಅಂತಹ ವ್ಯವಸ್ಥೆಗಳು ಸಮರ್ಪಕವಾಗಿರುತ್ತವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ.

## 18. ಸದಸ್ಯರ ಸಭೆ

ಕಂಪನಿಯ ದ್ವಿತೀಯ ವಾರ್ಷಿಕ ಸಾಮಾನ್ಯ ಸಭೆಯು 29ನೇ ಸೆಪ್ಟೆಂಬರ್ 2023ರಂದು ನಡೆಯಿತು.

## 19. ನಿರ್ದೇಶಕರ ಜವಾಬ್ದಾರಿಯುತ ಹೇಳಿಕೆ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 134 (5)ರ ನಿಬಂಧನೆಗಳಿಗೆ ಅನುಸಾರವಾಗಿ, ನಿಮ್ಮ ನಿರ್ದೇಶಕರು ಈ ಕೆಳಗಿನಂತೆ ದೃಢೀಕರಿಸುತ್ತಾರೆ:

ಎ. 31ನೇ ಮಾರ್ಚ್, 2024ಕ್ಕೆ ಕೊನೆಗೊಂಡ ಹಣಕಾಸು ವರ್ಷದ ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ ವಸ್ತು ನಿರ್ಗಮನಗಳಿಗೆ ಸಂಬಂಧಿಸಿದ ಸರಿಯಾದ ವಿವರಣೆಯೊಂದಿಗೆ ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸಲಾಗಿದೆ;

ಬಿ. ನಿರ್ದೇಶಕರು ಅಂತಹ ಲೆಕ್ಕಪತ್ರ ನೀತಿಗಳನ್ನು ಆಯ್ಕೆ ಮಾಡಿದ್ದಾರೆ ಮತ್ತು ಅವುಗಳನ್ನು ಸ್ಥಿರವಾಗಿ ಅನ್ವಯಿಸಿದ್ದಾರೆ. ಅಲ್ಲದೆ, ಆರ್ಥಿಕ ವರ್ಷದ ಕೊನೆಯಲ್ಲಿ ಕಂಪನಿಯ ವ್ಯವಹಾರಗಳ ಸ್ಥಿತಿ ಮತ್ತು ಲಾಭದ ನಿಜವಾದ ಮತ್ತು ನ್ಯಾಯೋಚಿತ ನೋಟವನ್ನು ನೀಡಲು ಸಮಂಜಸವಾದ ಮತ್ತು ವಿವೇಕಯುತವಾದ ತೀರ್ಪುಗಳು ಹಾಗೂ ಅಂದಾಜುಗಳನ್ನು ಮಾಡಿದ್ದಾರೆ;

ಸಿ. ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ನಿರ್ದೇಶಕರು ಕಂಪನಿಯ ಆಸ್ತಿಗಳನ್ನು ರಕ್ಷಿಸಲು, ವಂಚನೆ ಸೇರಿ ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಸಾಕಷ್ಟು ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗೆ ಸಾಕಷ್ಟು ಕಾಳಜಿ ವಹಿಸಿದ್ದಾರೆ;

ಡಿ. ನಿರ್ದೇಶಕರು ವಾರ್ಷಿಕ ಲೆಕ್ಕಪತ್ರಗಳನ್ನು ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆ ಆಧಾರದ ಮೇಲೆ ತಯಾರಿಸುವರು; ಮತ್ತು

ಇ. ಕಂಪನಿಯು ಲಿಸ್ಟಿಂಗ್‌ನಲ್ಲಿ ಇಲ್ಲದ ಕಂಪನಿಯಾಗಿದ್ದು, ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹಾಕುವುದಕ್ಕೆ ಸಂಬಂಧಿಸಿದ ಕಾಯ್ದೆಯ ಸೆಕ್ಷನ್ 134 (5) ರ ಉಪ ಷರತ್ತು ಅನ್ವಯಿಸುವುದಿಲ್ಲ; ಮತ್ತು

ಎಫ್. ಎಲ್ಲಾ ಅನ್ವಯವಾಗುವ ಕಾನೂನುಗಳ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕರು ಸರಿಯಾದ ವ್ಯವಸ್ಥೆಗಳನ್ನು ರೂಪಿಸಿದ್ದಾರೆ. ಅಲ್ಲದೆ, ಅಂತಹ ವ್ಯವಸ್ಥೆಗಳು ಸಮರ್ಪಕವಾಗಿರುತ್ತವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ.

## 20. ಪರಿಚ್ಛೇದ 186ರ ಅಡಿಯಲ್ಲಿ ಸಾಲಗಳು, ಖಾತರಿಗಳು ಮತ್ತು ಹೂಡಿಕೆಗಳ ವಿವರಗಳು

ಹಣಕಾಸು ವರ್ಷದಲ್ಲಿ ಸೆಕ್ಷನ್ 186 ರ ಅಡಿಯಲ್ಲಿ ಯಾವುದೇ ಸಾಲಗಳು, ಗ್ಯಾರಂಟಿಗಳು ಅಥವಾ ಹೂಡಿಕೆಗಳನ್ನು ಮಾಡಿಲ್ಲ. ಆದ್ದರಿಂದ ಈ ವಿಭಾಗದ ಅಡಿಯಲ್ಲಿ ವಿವರಗಳನ್ನು ನಮೂದಿಸಿಲ್ಲ.

## 21. ಸಂಬಂಧಿತ ಪಕ್ಷಗಳೊಂದಿಗೆ ಒಪ್ಪಂದಗಳು ಅಥವಾ ವ್ಯವಸ್ಥೆಗಳ ವಿವರಗಳು

ಕಂಪನಿಗಳ ಕಾಯ್ದೆ 2013 ರ ವಿಭಾಗ 188(1) ರಲ್ಲಿ ಉಲ್ಲೇಖಿಸಲಾದ ಸಂಬಂಧಿತ ಪಕ್ಷಗಳೊಂದಿಗೆ ಹಣಕಾಸು ವರ್ಷದಲ್ಲಿ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿಲ್ಲ.

## 22. ಬ್ಯಾಲೆನ್ಸ್ ಶೀಟ್ ದಿನಾಂಕ ಮತ್ತು ನಿರ್ದೇಶಕರ ವರದಿಯ ದಿನಾಂಕದ ನಡುವಿನ ಬದಲಾವಣೆಗಳು

ಹಣಕಾಸು ವರ್ಷದ ಅಂತ್ಯ ಮತ್ತು ಈ ವರದಿಯ ದಿನಾಂಕದ ನಡುವೆ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ.

## 23. ಶಕ್ತಿಯ ಸಂರಕ್ಷಣೆ, ತಂತ್ರಜ್ಞಾನದ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಖರ್ಚು

ಕಂಪನಿಯು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸದ ಕಾರಣ, ಶಕ್ತಿಯ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಖರ್ಚಿಗೆ ಸಂಬಂಧಿಸಿದ ಮಾಹಿತಿಯನ್ನು ಶೂನ್ಯ ಎಂದು ತೆಗೆದುಕೊಳ್ಳಬಹುದು.

## 24. ಅಪಾಯ ನಿಯಂತ್ರಣ ಕಾರ್ಯನೀತಿ

ಪ್ರತಿಯೊಂದು ಉದ್ಯಮದಲ್ಲಿಯೂ ರೂಢಿಯಲ್ಲಿರುವ ಹಾನಿ ನಿಯಂತ್ರಣ ತತ್ವವನ್ನು ಕಂಪನಿಯು ಬಹಳ ಹಿಂದಿನಿಂದಲೂ ಅನುಸರಿಸುತ್ತಿದೆಯಾದರೂ, ಈಗ ಅದು ಕಡ್ಡಾಯವಾಗಿ ಮಾರ್ಪಟ್ಟಿದೆ.

ಸ್ಥಿರತೆಯೊಂದಿಗೆ ಸುಸ್ಥಿರ ವ್ಯಾಪಾರ ಬೆಳವಣಿಗೆಯನ್ನು ಖಚಿತಪಡಿಸುವುದು ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಅಪಾಯಗಳನ್ನು ವರದಿ ಮಾಡುವುದು, ಮೌಲ್ಯಮಾಪನ ಮಾಡುವುದು ಹಾಗೂ ಪರಿಹರಿಸುವಲ್ಲಿ ಸಕ್ರಿಯ ವಿಧಾನವನ್ನು ಉತ್ತೇಜಿಸುವುದು ಮುಖ್ಯ ಉದ್ದೇಶವಾಗಿದೆ.

ಸಾಮಾನ್ಯ ಅಪಾಯಗಳೆಂದರೆ: ನಿಯಮಗಳು, ಸ್ಪರ್ಧೆ, ವ್ಯಾಪಾರ ಅಪಾಯ, ತಂತ್ರಜ್ಞಾನ ಬಳಕೆಯಲ್ಲಿಲ್ಲ, ಹೂಡಿಕೆಗಳು, ವ್ಯಾಪಾರ ಅಪಾಯ, ಮತ್ತಷ್ಟು ಆರ್ಥಿಕ ಅಪಾಯ, ರಾಜಕೀಯ ಅಪಾಯ, ನಿಷ್ಠೆಯ ಅಪಾಯ, ಕಾನೂನು ಅಪಾಯವನ್ನು ಒಳಗೊಂಡಿರುತ್ತದೆ.

ನೀತಿಯ ವಿಷಯವಾಗಿ, ಈ ಅಪಾಯಗಳನ್ನು ನಿರ್ಣಯಿಸಲಾಗುತ್ತದೆ ಮತ್ತು ಅದನ್ನು ತಗ್ಗಿಸಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

## 25. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಸಮಿತಿ ಮತ್ತು ಅದರ ನೀತಿ

ವರದಿ ಸಲ್ಲಿಸಿರುವ ವರ್ಷಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಸಾಮಾಜಿಕ ಜವಾಬ್ದಾರಿಗಳನ್ನು ಕುರಿತಾದ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ

## 26. ಜಾಗರಣಾ ಕಾರ್ಯವಿಧಾನದ ಸ್ಥಾಪನೆಯ ಕುರಿತು ಬಹಿರಂಗಪಡಿಸುವಿಕೆ

ಕಂಪನಿ ಜಾಗರಣಾ ಕಾರ್ಯವಿಧಾನಗಳಿಗೆ ಸಂಬಂಧಿಸಿದ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

## 27. ಲೆಕ್ಕ ಪರಿಶೋಧಕರು ಮತ್ತು ಅವರ ವರದಿ

ಎ. **ಶಾಸನಬದ್ಧ ಲೆಕ್ಕಪರಿಶೋಧಕರು**

ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 139(5) ಅಡಿಯಲ್ಲಿ ಸರ್ಕಾರಿ ಕಂಪನಿಯಾಗಿರುವುದರಿಂದ, ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಮೆ॥ ನಾಗಾ ಮತ್ತು ಅಸೋಸಿಯೇಟ್ಸ್ ಚಾರ್ಟೆಡ್ ಅಕೌಂಟೆಂಟ್ಸ್, ಬೆಂಗಳೂರು (ಎಫ್‌ಆರ್‌ಎನ್: 012824ಎಸ್) ಅವರನ್ನು 2023–24ರ ಹಣಕಾಸು ವರ್ಷಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿದೆ.

**ಲೆಕ್ಕಪರಿಶೋಧಕರ ವರದಿ:**

2023–24ರ ಹಣಕಾಸು ವರ್ಷಕ್ಕೆ ಲೆಕ್ಕ ಪರಿಶೋಧಕರ ವರದಿ ತಯಾರಿಸಲು ಯಾವುದೇ ಅರ್ಹತೆಗಳಿಲ್ಲ.

ಬಿ. **ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್**

ಕಂಪನಿಗಳ ಕಾಯ್ದೆ 2013ರ ಅನ್ವಯವಾಗುವ ನಿಬಂಧನೆಗಳ ಪ್ರಕಾರ, ಕಂಪನಿಯು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿಯ ಮುಂದೆ ಇಡಬೇಕಾದ ಪ್ರತಿಯೊಂದು ಹಣಕಾಸು ಹೇಳಿಕೆಗೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿ&ಎಜಿ) ನೀಡಿದ ಕಂಪನಿಯ ಹಣಕಾಸು ಪ್ರಕಟಣೆಗಳ ಪ್ರತಿಕ್ರಿಯೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪೂರಕ ಲೆಕ್ಕಪರಿಶೋಧನೆ ಪೂರ್ಣಗೊಂಡ ನಂತರ, ಸಿ&ಎಜಿ ಕಂಪನಿಗೆ ಸೆಕ್ಷನ್ 143 (6) (ಬಿ) ಅಡಿಯಲ್ಲಿ ಅಗತ್ಯವಿರುವಂತೆ ತನ್ನ ಕಾಮೆಂಟ್‌ಗಳನ್ನು ಮತ್ತು ಶೂನ್ಯ ವರದಿಯನ್ನು ನೀಡಿದೆ. ಅದನ್ನು ಸದಸ್ಯರ ಗಮನಕ್ಕೆ ತರಲು ಕಂಪನಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇರಿಸಲಾಗಿದೆ. ಕಂಪನಿಯ ಸಿ&ಎಜಿ ಪೂರಕ ಆಡಿಟ್ ವರದಿಯ ಪ್ರತಿಯನ್ನು ಅನುಬಂಧ 1ರಂತೆ ಲಗತ್ತಿಸಲಾಗಿದೆ.

ಸಿ. **ಕಾರ್ಯದರ್ಶಿ ಲೆಕ್ಕ ಪರಿಶೋಧಕರು**

ಪರಿಚ್ಛೇದ 204ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ವಿವರಗಳನ್ನು ನೀಡಿಲ್ಲ.

ಡಿ. **ವೆಚ್ಚ ಲೆಕ್ಕ ಪರಿಶೋಧಕರು, ವೆಚ್ಚದ ದಾಖಲೆಗಳ ನಿರ್ವಹಣೆ ಮತ್ತು ವೆಚ್ಚ ಲೆಕ್ಕಪರಿಶೋಧನೆ**

ಪರಿಚ್ಛೇದ 148(3)ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ವಿವರಗಳನ್ನು ನೀಡಲಾಗಿಲ್ಲ.

ಇ. **ಲೆಕ್ಕಪರಿಶೋಧಕರು ವರದಿ ಮಾಡಿದ ವಂಚನೆಗಳು**

ಕಾಯ್ದೆಯ ಸೆಕ್ಷನ್ 143ರ ಉಪ–ವಿಭಾಗ (12) ರ ಪ್ರಕಾರ, ಲೆಕ್ಕಪರಿಶೋಧಕರು ಆರ್ಥಿಕ ವರ್ಷದಲ್ಲಿ ಯಾವುದೇ ವಂಚನೆಗಳನ್ನು ವರದಿ ಮಾಡಿಲ್ಲ.

## 28. ಉದ್ಯೋಗಿಗಳ ವಿವರಗಳು

ಕಂಪನಿಗಳ ನಿಯಮಗಳು 5 (2) ಮತ್ತು 5 (3) (ವ್ಯವಸ್ಥಾಪಕ ಸಿಬ್ಬಂದಿ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮಗಳೊಂದಿಗೆ ಓದಿದ ಪರಿಚ್ಛೇದ 197ರ ಪ್ರಕಾರ ನಿಗದಿತ ಮಿತಿಯನ್ನು ಮೀರಿ ಸಂಭಾವನೆ ಪಡೆಯುವ ಯಾವುದೇ ಉದ್ಯೋಗಿಗಳಿಲ್ಲ.

## 29. ಅಂಗಸಂಸ್ಥೆ / ಜಂಟಿ ಉದ್ಯಮೆ / ಸಹವರ್ತಿ ಕಂಪನಿಗಳ ಮಾಹಿತಿ

ಕಂಪನಿಯು ಒಂದು ವಿಶೇಷ ಉದ್ದೇಶದ ವಾಹನವಾಗಿ ಮತ್ತು ಮೆ॥ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ ಕಂಪನಿಯ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾಗಿದೆ. ಈ ಕಂಪನಿಯು ಯಾವುದೇ ಅಂಗಸಂಸ್ಥೆ / ಜಂಟಿ ಉದ್ಯಮೆ / ಸಹವರ್ತಿ ಕಂಪನಿಯನ್ನು ಹೊಂದಿಲ್ಲ.

## 30. ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ ಅಡಿಯಲ್ಲಿ ಬಹಿರಂಗಪಡಿಸುವಿಕೆ

2013ರ ಮಾರ್ಚ್ 31, 2024 ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದಲ್ಲಿ ಯಾವುದೇ ದೂರು ದಾಖಲಾಗಿಲ್ಲ.

## 31. ಕೃತಜ್ಞತೆಗಳು

ಬಿ–ರೈಡ್ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಇಲಾಖೆ ಜತೆಗೆ ನಿಕಟ ಸಂಬಂಧ ಬೆಳೆಸಿಕೊಂಡಿದೆ.

ನಗರ ಭೂ ಸಾರಿಗೆ ನಿರ್ದೇಶನಾಲಯ (ಡಿಯುಎಲ್‌ಟಿ), ಹಣಕಾಸು ಇಲಾಖೆ/ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ, ಭಾರತ ಸರ್ಕಾರ, ನೈಋತ್ಯ ರೈಲ್ವೆ ಇತ್ಯಾದಿ. ನಿರ್ದೇಶಕರ ಮಂಡಳಿಯು ಸಹಾಯವನ್ನು ಕೃತಜ್ಞತೆಯಿಂದ ಅಂಗೀಕರಿಸಲು ಬಯಸುತ್ತದೆ. ಅವರೆಲ್ಲರಿಂದ ಮಾರ್ಗದರ್ಶನ ಪಡೆದು ಮಂಡಳಿಯ ಆದೇಶದ ಮೇರೆಗೆ ವರದಿ ತಯಾರಿಸಲಾಗಿದೆ.

**ಮಂಡಳಿ ಆದೇಶದ ಮೇರೆಗೆ**

**ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ,**
**ಬಿ–ರೈಡ್**

**ಸ್ಥಳ: ಬೆಂಗಳೂರು**
**ದಿನಾಂಕ: 21/12/2024**

ಸಹಿ/–
**ಡಾ. ಶಾಲಿನಿ ರಜನೀಶ್,** ಐಎಎಸ್
ಅಧ್ಯಕ್ಷರು

# ಸ್ವತಂತ್ರ ಲೆಕ್ಕಪರಿಶೋಧಕರ ವರದಿ

**ಗೆ**

ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತದ ಸದಸ್ಯರಿಗೆ.

**ಸ್ವತಂತ್ರ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯ ವರದಿ**

**ಅಭಿಪ್ರಾಯ**

ನಾವು, 'ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ("ಕಂಪನಿ")ದ ಇದರೊಡನೆ ಲಗತ್ತಿಸಲಾದ ಸ್ವತಂತ್ರ ಹಣಕಾಸಿನ ಲೆಕ್ಕಪತ್ರಗಳ ತಪಾಸಣೆ ಮಾಡಿದ್ದು, ಮಾರ್ಚ್ 31, 2024ರವರೆಗಿನ ಆಯ–ವ್ಯಯ ಪತ್ರ, ಇಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ (See ಬಿ–ರೈಡ್ Book. Page No 6) ಇದೆ. ಅಂದಿಗೆ ಕೊನೆಗೊಂಡ ವಿತ್ತೀಯ ವರ್ಷದ ನಗದು ಹೇಳಿಕೆ ಮತ್ತು ಹಣಕಾಸು ಒಕ್ಕಣೆಗಳಿಗೆ, ಟಿಪ್ಪಣಿಗಳಿಗೆ ಪೂರಕವಾಗಿ ಲೆಕ್ಕಪರಿಶೋಧನೆ ನೀತಿಗಳ ಸಾರಾಂಶ ಮತ್ತು ಇತರ ಮಾಹಿತಿಗಳನ್ನು ಈ ಲೆಕ್ಕಪತ್ರಗಳು ಒಳಗೊಂಡಿವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ಮಾಹಿತಿಗೆ ಹಾಗೂ ನಮಗೆ ನೀಡಿದ ವಿವರಣೆಗಳ ಪ್ರಕಾರ, ಮೇಲೆ ಹೇಳಿದ ಸ್ವತಂತ್ರ ಹಣಕಾಸು ಹೇಳಿಕೆಗಳು ಕಂಪನಿಗಳ ಕಾಯ್ದೆ, 2013 ('ಆಕ್ಟ್') ಗೆ ಅಗತ್ಯವಿರುವ ಮಾಹಿತಿಯನ್ನು ನೀಡುತ್ತವೆ. ಇವು ನಿಜವಾದ ಮತ್ತು ನ್ಯಾಯೋಚಿತತೆಯನ್ನು ನೀಡುತ್ತವೆ. 31 ಮಾರ್ಚ್ 2024ರಂತೆ ಕಂಪನಿಯ ವ್ಯವಹಾರಗಳ ಸ್ಥಿತಿ, ಅದರ ನಷ್ಟ, ಇಕ್ವಿಟಿಯಲ್ಲಿನ ಬದಲಾವಣೆಗಳು ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷಕ್ಕೆ ಅದರ ನಗದು ಹರಿವುಗಳನ್ನು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿದ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ ಪರಿಷ್ಕರಿಸಲಾಗಿದೆ.

ಈ ವರದಿಯ ಸೆಪ್ಟೆಂಬರ್ 4, 2024ರ ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯನ್ನು 31 ಮಾರ್ಚ್, 2024ಕ್ಕೆ ಅಂತ್ಯಗೊಂಡ ವರ್ಷಕ್ಕೆ ಕಂಪನಿಯ ಹಣಕಾಸು ಹೇಳಿಕೆಗಳ ಮಾಹಿತಿ ನೀಡುತ್ತದೆ. ಇದನ್ನು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಡಿಟ್ ನಿಂದ ಅಂಗೀಕರಿಸಿದ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ ಪರಿಷ್ಕರಿಸಲಾಗಿದೆ.

**ಅಭಿಪ್ರಾಯಕ್ಕೆ ಆಧಾರ**

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ (ಎಸ್‌ಎಎಸ್) ಅನುಸಾರವಾಗಿ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿದ್ದೇವೆ. ಆ ಮಾನದಂಡಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ನಮ್ಮ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ವಿವರಿಸಲಾಗಿದೆ. ಕಂಪನಿಗಳ ಕಾಯ್ದೆ, 2013ರ ನಿಬಂಧನೆಗಳ ಅಡಿಯಲ್ಲಿ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳೊಂದಿಗೆ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯು ಹೊರಡಿಸಿದ ನೀತಿ ಸಂಹಿತೆಯ ಅನುಸಾರವಾಗಿ ನಾವು ಕಂಪನಿಯಿಂದ ಸ್ವತಂತ್ರರಾಗಿದ್ದೇವೆ. ಈ ಅವಶ್ಯಕತೆಗಳು ಮತ್ತು ನೀತಿ ಸಂಹಿತೆಗೆ ಅನುಗುಣವಾಗಿ ನಾವು ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ. ನಾವು ಪಡೆದ ಆಡಿಟ್ ಪುರಾವೆಗಳು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವೆಂದು ನಾವು ನಂಬಿದ್ದೇವೆ.

**ಪ್ರಮುಖ ಲೆಕ್ಕಪರಿಶೋಧನ ವಿಷಯಗಳು**

ಪ್ರಮುಖ ಆಡಿಟ್ ವಿಷಯಗಳೆಂದರೆ, ನಮ್ಮ ವೃತ್ತಿಪರ ವಿಚಾರದ ಪ್ರಕಾರ, ನಮ್ಮ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಮಹತ್ವದ್ದಾಗಿದೆ. ಒಟ್ಟಾರೆಯಾಗಿ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಮತ್ತು ರಚನೆಯಲ್ಲಿ ಈ ವಿಷಯಗಳನ್ನು ತಿಳಿಸಲಾಗಿದೆ.

ಅದರ ಬಗ್ಗೆ ನಮ್ಮ ಅಭಿಪ್ರಾಯ, ಮತ್ತು ನಾವು ಈ ವಿಷಯಗಳ ಬಗ್ಗೆ ಪ್ರತ್ಯೇಕ ಅಭಿಪ್ರಾಯವನ್ನು ನೀಡುವುದಿಲ್ಲ. ಎಸ್‌ಎ 701ರ ಪ್ರಕಾರ ಪ್ರಮುಖ ಆಡಿಟ್ ವಿಷಯಗಳ ವರದಿ, ಪ್ರಮುಖ ಆಡಿಟ್ ವಿಷಯಗಳು ಕಂಪನಿಯು ಪಟ್ಟಿ ಮಾಡದ ಕಂಪನಿಯಾಗಿರುವುದರಿಂದ ಈ ಕಾಯ್ದೆಯು ಕಂಪನಿಗೆ ಅನ್ವಯಿಸುವುದಿಲ್ಲ.

**ಹಣಕಾಸಿನ ಹೇಳಿಕೆಗಳು ಮತ್ತು ಲೆಕ್ಕಪರಿಶೋಧಕರ ವರದಿ ಹೊರತುಪಡಿಸಿ ಇತರ ಮಾಹಿತಿ**

ಕಂಪನಿಯ ನಿರ್ವಹಣೆ ಮತ್ತು ನಿರ್ದೇಶಕರ ಮಂಡಳಿಯು ಇತರ ಮಾಹಿತಿಗೆ ಜವಾಬ್ದಾರರಾಗಿರುತ್ತಾರೆ. ಇತರ ಮಾಹಿತಿಯು ಅನುಬಂಧಗಳು ಸೇರಿದಂತೆ ಮಂಡಳಿಯ ವರದಿಯಲ್ಲಿ ಒಳಗೊಂಡಿರುವ ಮಾಹಿತಿಯನ್ನು ಒಳಗೊಂಡಿರುತ್ತದೆ. ಆದರೆ ಹಣಕಾಸಿನ ಹೇಳಿಕೆಗಳು ಮತ್ತು ನಮ್ಮ ಲೆಕ್ಕಪರಿಶೋಧಕರ ಮಾಹಿತಿಯನ್ನು ಒಳಗೊಂಡಿಲ್ಲ.

ಹಣಕಾಸಿನ ಹೇಳಿಕೆಯಲ್ಲಿನ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಂಡಿರುವುದಿಲ್ಲ ಮತ್ತು ನಾವು ಯಾವುದೇ ರೀತಿಯ ಭರವಸೆಯ ತೀರ್ಮಾನವನ್ನು ವ್ಯಕ್ತಪಡಿಸುವುದಿಲ್ಲ. ಹಣಕಾಸಿನ ಹೇಳಿಕೆಗಳ ನಮ್ಮ ಆಡಿಟ್‌ಗೆ ಸಂಬಂಧಿಸಿದಂತೆ, ಇತರ ಮಾಹಿತಿಯನ್ನು ಓದುವುದು ಮತ್ತು ಹಾಗೆ ಮಾಡುವಾಗ ಪರಿಗಣಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಇತರ ಮಾಹಿತಿಯು ಹಣಕಾಸಿನ ಹೇಳಿಕೆಗಳೊಂದಿಗೆ ವಸ್ತುವಾಗಿ ಅಸಮಂಜಸವಾಗಿದೆಯೇ ಅಥವಾ ನಮ್ಮ ಜ್ಞಾನವನ್ನು ಆಡಿಟ್‌ನಲ್ಲಿ ಪಡೆಯಲಾಗಿದೆಯೇ ಅಥವಾ ಇಲ್ಲದಿದ್ದರೆ ವಸ್ತುನಿಷ್ಠ ತಪ್ಪಾಗಿ ತೋರುತ್ತಿದೆ.

ನಾವು ನಿರ್ವಹಿಸಿದ ಕೆಲಸದ ಆಧಾರದ ಮೇಲೆ, ಈ ಇತರ ಮಾಹಿತಿಯ ವಸ್ತು ತಪ್ಪು ಹೇಳಿಕೆ ಇದೆ ಎಂದು ನಾವು ತೀರ್ಮಾನಿಸಿದರೆ; ನಾವು ಆ ಸತ್ಯವನ್ನು ವರದಿ ಮಾಡುವ ಅಗತ್ಯವಿದೆ. ಈ ವಿಷಯದಲ್ಲಿ ನಾವು ವರದಿ ಮಾಡಲು ಏನೂ ಇಲ್ಲ.

**ನಿರ್ವಹಣಾ ಜವಾಬ್ದಾರಿಗಳು ಮತ್ತು ಸ್ವತಂತ್ರ ಹಣಕಾಸು ಹೇಳಿಕೆಗಳಿಗಾಗಿ ಆಡಳಿತದ ಹೊಣೆ ಹೊತ್ತಿರುವವರು**

ಕಂಪನಿಗಳ ಕಾಯ್ದೆ, 2013 ಪರಿಚ್ಛೇದ 134(5)ರಲ್ಲಿ ಹೇಳಲಾದ ವಿಷಯಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿಯು ಜವಾಬ್ದಾರವಾಗಿರುತ್ತದೆ. ಹಣಕಾಸಿನ ಸ್ಥಿತಿಯ ನಿಜವಾದ ಮತ್ತು ನ್ಯಾಯೋಚಿತ ದೃಷ್ಟಿಕೋನವನ್ನು ನೀಡುವ ಈ ಸ್ವತಂತ್ರ ಹಣಕಾಸು ಹೇಳಿಕೆಗಳ ತಯಾರಿಕೆಗೆ ಸಂಬಂಧಿಸಿದಂತೆ, ಹಣಕಾಸಿನ ಕಾರ್ಯಕ್ಷಮತೆ, ಸಾಮಾನ್ಯವಾಗಿ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ ಕಂಪನಿಯ ಇಕ್ವಿಟಿ ಮತ್ತು ಕಾಯ್ದೆಯ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪತ್ರ ಮಾನದಂಡಗಳನ್ನು ಒಳಗೊಂಡಂತೆ ಕಂಪನಿ ಲೆಕ್ಕಪತ್ರ ನಿಯಮಗಳನ್ನು ಭಾರತದಲ್ಲಿ

ಸ್ವೀಕರಿಸಲಾಗಿದೆ. ಆಸ್ತಿಗಳ ಸಂರಕ್ಷಣೆಗಾಗಿ ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಸಾಕಷ್ಟು ಲೆಕ್ಕಪತ್ರ ದಾಖಲೆಗಳ ನಿರ್ವಹಣೆ, ಕಂಪನಿ ಮತ್ತು ವಂಚನೆಗಳು ಮತ್ತು ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚುವ ಜವಾಬ್ದಾರಿಗಳು ಸೇರಿವೆ. ಹಾಗೆಯೇ, ಸರಿಯಾದ ಲೆಕ್ಕಪತ್ರದ ಆಯ್ಕೆ ಮತ್ತು ಅಪ್ಲಿಕೇಶನ್ ನೀತಿಗಳು; ಸಮಂಜಸವಾದ ಮತ್ತು ವಿವೇಕಯುತವಾದ ತೀರ್ಪುಗಳು ಮತ್ತು ಅಂದಾಜುಗಳನ್ನು ಮಾಡುವುದು; ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳು, ಲೆಕ್ಕಪತ್ರ ನಿರ್ವಹಣೆಯ ನಿಖರತೆ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ದೃಢಪಡಿಸಿಕೊಳ್ಳುವುದು. ದಾಖಲೆಗಳು, ಹಣಕಾಸು ಹೇಳಿಕೆಯ ತಯಾರಿಕೆ ಮತ್ತು ಪ್ರಸ್ತುತಿಗೆ ಸಂಬಂಧಿಸಿದವು, ಅದು ನಿಜವಾದ ಮತ್ತು ನ್ಯಾಯೋಚಿತ ನೋಟವನ್ನು ನೀಡುತ್ತದೆ ಮತ್ತು ಅವು ದೋಷಗಳಿಂದ ಮುಕ್ತವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಹಣಕಾಸಿನ ಒಕ್ಕಣೆಗಳನ್ನು ಸಿದ್ಧಪಡಿಸುವಾಗ ಕಂಪನಿಯು "ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆ" ಆಗಿ ಮುಂದುವರಿಯಲು ಸಮರ್ಥವೋ ಅಲ್ಲವೋ ಎನ್ನುವುದನ್ನು ನಿರ್ಧರಿಸುವ, ಅಗತ್ಯಕ್ಕೆ ತಕ್ಕಂತೆ "ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆ"ಯ ವಿಷಯಗಳನ್ನು ತಿಳಿಸುವ ಮತ್ತು 'ಖಾತ್ರಿಯಾಗಿ ಚಾಲ್ತಿಯಲ್ಲಿರತಕ್ಕ ಸಂಸ್ಥೆಯ ನೀತಿಯ ಆಧಾರದ ಮೇರೆಗೆ ಲೆಕ್ಕಪತ್ರಗಳನ್ನು ತಯಾರಿಸುವ ಜವಾಬ್ದಾರಿಯನ್ನು ಆಡಳಿತ ಮಂಡಳಿಯ ಹೊಂದಿರುತ್ತದೆ. ಆಡಳಿತ ಮಂಡಳಿಯು ಕಂಪನಿಯನ್ನು ಮುಚ್ಚಿಬಿಡಲು ತೀರ್ಮಾನಿಸಿದರೆ ಅಥವಾ ಚಟುವಟಿಕೆಗಳನ್ನು ನಿಲ್ಲಿಸಿದರೆ ಅಥವಾ ಇವರೆಡು ಆಯ್ಕೆಗಳಲ್ಲೊಂದು ಕಂಪನಿಗೆ ಅನಿವಾರ್ಯವಾದರೆ ಮಾತ್ರ ಕಂಪನಿಗೆ ಮೇಲ್ಕಾಣಿಸಿದ ಜವಾಬ್ದಾರಿಗಳು ಇರುವುದಿಲ್ಲ. ಲೆಕ್ಕಪತ್ರಗಳ ವರದಿ ಸಲ್ಲಿಸುವ ಪ್ರಕ್ರಿಯೆಯ ಮೇಲ್ವಿಚಾರಣೆಗಳಿಗೂ ನಿರ್ದೇಶಕರ ಮಂಡಳಿಯು ಹೊಣೆಗಾರ ಆಗಿರುತ್ತದೆ.

**ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು**

ನಮ್ಮ ಉದ್ದೇಶಗಳು ಒಟ್ಟಾರೆಯಾಗಿ ಹಣಕಾಸಿನ ಹೇಳಿಕೆಗಳು ತಪ್ಪು ಹೇಳಿಕೆಯಿಂದ ಮುಕ್ತವಾಗಿವೆಯೇ ಎಂಬುದರ ಕುರಿತು ಸಮಂಜಸವಾದ ಭರವಸೆಯನ್ನು ಪಡೆಯುವುದು, ವಂಚನೆ ಅಥವಾ ದೋಷದಿಂದಾಗಿ ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದಾಗಿದೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದೆ, ಆದರೆ ಎಸ್‌ಎಗಳಿಗೆ ಅನುಗುಣವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ಅಸ್ತಿತ್ವದಲ್ಲಿರುವಾಗ ಯಾವಾಗಲೂ ವಸ್ತು ತಪ್ಪು ಹೇಳಿಕೆಯನ್ನು ಪತ್ತೆ ಮಾಡುತ್ತದೆ ಎಂಬುದಕ್ಕೆ ಖಾತರಿಯಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ದೋಷದಿಂದ ಉದ್ಭವಿಸಬಹುದು ಮತ್ತು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ, ಈ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳನ್ನು ಸಮಂಜಸವಾಗಿ ಪ್ರಭಾವಿಸಬಹುದೆಂದು ನಿರೀಕ್ಷಿಸಬಹುದು.

ಎಸ್‌ಎಗಳಿಗೆ ಅನುಗುಣವಾಗಿ ಆಡಿಟ್‌ನ ಭಾಗವಾಗಿ, ನಾವು ವೃತ್ತಿಪರ ತೀರ್ಪುಗಳನ್ನು ನಿರ್ವಹಿಸುತ್ತೇವೆ ಮತ್ತು ಆಡಿಟ್‌ನ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ನಿರ್ವಹಿಸುತ್ತೇವೆ. ನಾವು:

- ವಂಚನೆ ಅಥವಾ ದೋಷದಿಂದಾಗಿ ಹಣಕಾಸಿನ ಹೇಳಿಕೆಗಳ ವಸ್ತು ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸಿ ನಿರ್ಣಯಿಸಲಾಗುತ್ತದೆ. ಆ ಅಪಾಯಗಳಿಗೆ ಸ್ಪಂದಿಸುವ ಆಡಿಟ್ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ, ನಿರ್ವಹಿಸಿ ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಆಡಿಟ್ ಪುರಾವೆಗಳನ್ನು ಪಡೆದುಕೊಳ್ಳಾಗುತ್ತದೆ. ವಂಚನೆ, ನಕಲಿ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣದ ಒಳಸಂಚನ್ನು ಒಳಗೊಂಡಿರುವುದರಿಂದ ವಂಚನೆಯಿಂದ ಉಂಟಾಗುವ ವಸ್ತು ತಪ್ಪು ಹೇಳಿಕೆಯನ್ನು ಕಂಡುಹಿಡಿಯದಿರುವ ಅಪಾಯವು ದೋಷದಿಂದ ಉಂಟಾಗುವ ಒಂದಕ್ಕಿಂತ ಹೆಚ್ಚಾಗಿರುತ್ತದೆ.
- ಸಂದರ್ಭಕ್ಕೆ ಸೂಕ್ತವೆನಿಸುವ ಆಡಿಟ್ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಆಡಿಟ್‌ಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳಿವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 143 (3) (i) ಅಡಿಯಲ್ಲಿ, ಕಂಪನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾವು ಜವಾಬ್ದಾರರಾಗಿದ್ದೇವೆ.
- ಬಳಸಿದ ಲೆಕ್ಕಪತ್ರ ನೀತಿಗಳ ಸೂಕ್ತತೆ ಮತ್ತು ಲೆಕ್ಕಪರಿಶೋಧಕ ಅಂದಾಜುಗಳ ಸಮಂಜಸತೆ ಮತ್ತು ನಿರ್ವಹಣೆಯಿಂದ ಮಾಡಿದ ಸಂಬಂಧಿತ ಅಂಶಗಳ ಬಹಿರಂಗಪಡಿಸುವಿಕೆಗಳನ್ನು ಮೌಲ್ಯಮಾಪನ ಮಾಡಿದ್ದೇವೆ.
- ಲೆಕ್ಕಪರಿಶೋಧನೆಯ ಆಧಾರದ ಮೇಲೆ ನಿರ್ವಹಣೆಯ ಬಳಕೆಯ ಸೂಕ್ತತೆಯ ಬಗ್ಗೆ ತೀರ್ಮಾನಿಸಿ ಮತ್ತು ಪಡೆದ ಆಡಿಟ್ ಪುರಾವೆಗಳ ಆಧಾರದ ಮೇಲೆ, ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದ ವಸ್ತು ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ, ಇದು ಕಂಪನಿಯು ಮುಂದುವರಿಯುವ ಕಾಳಜಿಯಾಗಿ ಮುಂದುವರಿಯುವ ಸಾಮರ್ಥ್ಯದ ಮೇಲೆ ಗಮನಾರ್ಹವಾದ ಅನುಮಾನವನ್ನು ಉಂಟುಮಾಡುತ್ತದೆ. ವಸ್ತು ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಹಣಕಾಸು ಹೇಳಿಕೆಗಳಲ್ಲಿನ ಸಂಬಂಧಿತ ಬಹಿರಂಗಪಡಿಸುವಿಕೆಗಳಿಗೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ನಾವು ಗಮನ ಸೆಳೆಯುವ ಅಗತ್ಯವಿದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಆಡಿಟ್ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ, ಭವಿಷ್ಯದ ಸಂದರ್ಭಗಳು ಅಥವಾ ಷರತ್ತುಗಳು ಕಂಪನಿಯು ನಡೆಯುತ್ತಿರುವ ಕಾಳಜಿಯಾಗಿ ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.
- ಬಹಿರಂಗಪಡಿಸುವಿಕೆಗಳನ್ನು ಒಳಗೊಂಡಂತೆ ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಮತ್ತು ಹಣಕಾಸಿನ ಹೇಳಿಕೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆ.
- ಇತರ ವಿಷಯಗಳ ಜೊತೆಗೆ, ಯೋಜಿತ ವ್ಯಾಪ್ತಿ ಮತ್ತು ಸಮಯದ ಬಗ್ಗೆ ಆಡಳಿತದ ಆರೋಪ ಹೊತ್ತಿರುವವರೊಂದಿಗೆ ನಾವು ಸಂವಹನ ನಡೆಸಿದ್ದೇವೆ.

ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನತೆಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆ ಮತ್ತು ಗಮನಾರ್ಹವಾದ ಆಡಿಟ್ ಸಂಶೋಧನೆಗಳು ಇರುತ್ತವೆ.

ನಾವು ಸ್ವಾತಂತ್ರ್ಯದ ಬಗ್ಗೆ ಸಂಬಂಧಿತ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಮತ್ತು ಸಮಂಜಸವಾಗಿ ಯೋಚಿಸಬಹುದಾದ ಎಲ್ಲಾ

ಸಂಬಂಧಗಳು ಮತ್ತು ಇತರ ವಿಷಯಗಳೊಂದಿಗೆ ಸಂವಹನ ನಡೆಸಲು ನಾವು ಆಡಳಿತದ ಆರೋಪ ಹೊತ್ತಿರುವವರಿಗೆ ಹೇಳಿಕೆಯನ್ನು ನೀಡುತ್ತೇವೆ.

ನಮ್ಮ ಸ್ವಾತಂತ್ರ್ಯವನ್ನು ಮತ್ತು ಎಲ್ಲಿ ಅನ್ವಯಿಸುತ್ತದೆಯೋ ಅಲ್ಲಿ ಸಂಬಂಧಿತ ರಕ್ಷಣೋಪಾಯಗಳನ್ನು ಆಡಳಿತದ ಹೊಣೆ ಹೊತ್ತಿರುವವರೊಂದಿಗೆ ಸಂವಹಿಸಿದ ವಿಷಯಗಳಿಂದ, ಹೆಚ್ಚಿನ ವಿಷಯಗಳನ್ನು ನಾವು ನಿರ್ಧರಿಸುತ್ತೇವೆ. ಪ್ರಸ್ತುತ ಅವಧಿಯ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಮಹತ್ವ ಮತ್ತು ಆದ್ದರಿಂದ ಪ್ರಮುಖ ಆಡಿಟ್ ವಿಷಯಗಳನ್ನು ನಾವು ವಿವರಿಸಿದ್ದೇವೆ.

ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಈ ವಿಷಯಗಳು ಕಾನೂನು ಅಥವಾ ನಿಯಂತ್ರಣವು ವಿಷಯದ ಬಗ್ಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ತಡೆಯದ ಹೊರತು ಅಥವಾ ಅಪರೂಪದ ಸಂದರ್ಭಗಳಲ್ಲ, ನಮ್ಮ ವರದಿಯಲ್ಲಿ ಒಂದು ವಿಷಯವನ್ನು ತಿಳಿಸಬಾರದು ಎಂದು ನಾವು ನಿರ್ಧರಿಸುತ್ತೇವೆ. ಏಕೆಂದರೆ ಇದರ ಪ್ರತಿಕೂಲ ಪರಿಣಾಮಗಳು ಇರುತ್ತವೆ.

ಹಾಗೆ ಮಾಡುವುದು ಅಂತಹ ಸಂವಹನದ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರಿಸುತ್ತದೆ ಎಂದು ಸಮಂಜಸವಾಗಿ ನಿರೀಕ್ಷಿಸಲಾಗಿದೆ.

**ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಕುರಿತು ವರದಿ**

**1.** ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2020 ("ದಿ ಆರ್ಡರ್")ಗೆ ಅಗತ್ಯವಿರುವಂತೆ, 2013ರ ಕಂಪನಿ ಕಾಯ್ದೆಯ ಸೆಕ್ಷನ್ 143ರ ಉಪ–ವಿಭಾಗ (11)ರ ಪ್ರಕಾರ ನಾವು ಅನುಬಂಧದಲ್ಲಿ ನೀಡುತ್ತೇವೆ. "A", ಅನ್ವಯವಾಗುವ ಮಟ್ಟಿಗೆ ಆದೇಶದ ಪ್ಯಾರಾಗ್ರಾಫ್ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಮೇಲಿನ ಹೇಳಿಕೆಯಾಗಿದೆ.

**2.** ನಾವು ಕಂಪನಿಯ ಪುಸ್ತಕಗಳು ಮತ್ತು ದಾಖಲೆಗಳ ಪರಿಶೀಲನೆಗಳ ಆಧಾರದ ಮೇಲೆ ಕಾಯ್ದೆಯ ಸೆಕ್ಷನ್ 143(5) ರ ಪ್ರಕಾರ ನಮ್ಮ ವರದಿಯನ್ನು ನಾವು ಸೂಕ್ತವೆಂದು ಪರಿಗಣಿಸಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ 'ಅನುಬಂಧ–ಬಿ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ನೀಡಿದ ನಿರ್ದೇಶನಗಳು ಮತ್ತು ಉಪನಿರ್ದೇಶನಗಳ ಮೇಲೆ ನಿರ್ಧರಿತವಾಗಿರುತ್ತದೆ.

**3.** ಕಾಯ್ದೆಯ ಸೆಕ್ಷನ್ 143(3) ರ ಪ್ರಕಾರ, ನಾವು ಇಲ್ಲಿ ಸಲ್ಲಿಸುತ್ತಿರುವ ವರದಿಯೇನೆಂದರೆ:

ಎ. ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ನಮಗೆ ತಿಳಿದಿರುವ ಮತ್ತು ನಂಬಿಕೆಯ ಅತ್ಯುತ್ತಮವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಹುಡುಕಿದ್ದೇವೆ ಮತ್ತು ಪಡೆದುಕೊಂಡಿದ್ದೇವೆ.

ಬಿ. ನಮ್ಮ ಅಭಿಪ್ರಾಯದಲ್ಲಿ, ನಿಯಮದ ಅಡಿಯಲ್ಲಿ ವರದಿ ಮಾಡುವ ಕೆಳಗಿನ ಪ್ಯಾರಾಗ್ರಾಫ್ 3 (ಎಚ್) (vi) ನಲ್ಲಿ ತಿಳಿಸಲಾದ ವಿಷಯಗಳನ್ನು ಹೊರತುಪಡಿಸಿ ಆ ಪುಸ್ತಕಗಳ ದಾಖಲೆಗಳ ನಮ್ಮ ಪರೀಕ್ಷೆಯಿಂದ ಕಂಡುಬರುವ ಕಾನೂನಿನ ಪ್ರಕಾರ ಸರಿಯಾದ ಖಾತೆಯ ಪುಸ್ತಕಗಳನ್ನು 11(ಜಿ) ಕಂಪನಿಗಳ (ಆಡಿಟ್ ಮತ್ತು ಆಡಿಟರ್ಸ್) ನಿಯಮಗಳು, 2014ರ ಅನ್ವಯ ಕಂಪನಿಯು ಇಲ್ಲಿಯವರೆಗೆ ಲಗತ್ತಿಸಿದ್ದೇವೆ.

ಸಿ. ಸ್ವತಂತ್ರ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಸ್ವತಂತ್ರ ಹೇಳಿಕೆ (ಇತರ ಸಮಗ್ರ ಸೇರಿದಂತೆ ಆದಾಯ), ಈಕ್ವಿಟಿಯಲ್ಲಿನ ಬದಲಾವಣೆಗಳ ಸ್ವತಂತ್ರ ಹೇಳಿಕೆ ಮತ್ತು ನಗದು ಹರಿವಿನ ಸ್ವತಂತ್ರ ಹೇಳಿಕೆಗಳ ಕುರಿತು ಈ ವರದಿಯು ಖಾತೆಯ ಪುಸ್ತಕಗಳೊಂದಿಗೆ ಒಪ್ಪಂದದಲ್ಲಿದೆ.

ಡಿ. ನಮ್ಮ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಹಣಕಾಸು ಹೇಳಿಕೆಗಳು ಕಾಯ್ದೆಯ ಸೆಕ್ಷನ್ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪರಿಶೋಧಕ ಮಾನದಂಡಗಳಿಗೆ ಅನುಗುಣವಾಗಿರುತ್ತವೆ. ಕಂಪನಿಗಳ (ಖಾತೆಗಳು) ನಿಯಮಗಳು, 2014ರ ನಿಯಮ 7ರೊಂದಿಗೆ ಓದಿ.

ಇ. ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ 15ನೇ ಜೂನ್ 2015 ರ ಅಧಿಸೂಚನೆ ಸಂಖ್ಯೆ ಜಿಎಸ್ ಆರ್ 463 (ಇ) ಗೆ ಅನುಸಾರವಾಗಿ ಸರ್ಕಾರಿ ಕಂಪನಿಯಾಗಿದೆ. ಹಾಗಾಗಿ, ಕಂಪನಿಗಳ ಕಾಯ್ದೆ, 2013ರ ವಿಭಾಗ 164(2) ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

ಎಫ್. ಖಾತೆಗಳ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಸಂಬಂಧಿಸಿದ ಕಾಯ್ದಿರಿಸುವಿಕೆಯು ಕಂಪನಿಗಳ (ಆಡಿಟ್ ಮತ್ತು ಆಡಿಟರ್ಸ್) ನಿಯಮಗಳು, 2014ರ ಸೆಕ್ಷನ್ 143(3)(ಬಿ) ಅಡಿಯಲ್ಲಿ ವರದಿ ಮಾಡುವ ಮೇಲಿನ ಪ್ಯಾರಾಗ್ರಾಫ್ 3(ಬಿ) ಮತ್ತು ನಿಯಮ 11(ಜಿ) ಅಡಿಯಲ್ಲಿ ವರದಿ ಮಾಡುವ ಕೆಳಗಿನ ಪ್ಯಾರಾಗ್ರಾಫ್ 3(ಹ) ನಲ್ಲಿ ಹೇಳಲಾಗಿದೆ.

ಜಿ. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯನ್ನು ಆಧರಿಸಿ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಗಳು ಜಾರಿಯಲ್ಲಿವೆ ಮತ್ತು ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವವು ತೃಪ್ತಿಕರವಾಗಿದೆ ಎಂದು ನಾವು ಕಂಡುಕೊಳ್ಳುತ್ತೇವೆ. ಇದನ್ನು 'ಅನುಬಂಧ–ಸಿ' ನಲ್ಲಿ ಆಂತರಿಕ ಹಣಕಾಸು ನಿಯಂತ್ರಣದೊಂದಿಗೆ ಉಲ್ಲೇಖಿಸಲಾಗಿದೆ.

ಎಚ್. ಕಂಪನಿಗಳ (ಆಡಿಟ್ ಮತ್ತು ಆಡಿಟರ್ಸ್) ನಿಯಮಗಳು, 2014 ರ ನಿಯಮ 11ರ ಪ್ರಕಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ಮಾಹಿತಿ ಹಾಗೂ ನಮಗೆ ನೀಡಿದ ವಿವರಣೆಗಳ ಪ್ರಕಾರ:

(i) ಕಂಪನಿಯು ತನ್ನ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಬಾಕಿ ವ್ಯಾಜ್ಯಗಳನ್ನು ಹೊಂದಿಲ್ಲ;

(i) ಕಂಪನಿಯು ಯಾವುದೇ ವಸ್ತು ನಿರೀಕ್ಷಿತ ನಷ್ಟಗಳಿರುವ ಉತ್ಪನ್ನ ಒಪ್ಪಂದಗಳನ್ನು ಒಳಗೊಂಡಂತೆ ಯಾವುದೇ ದೀರ್ಘಾವಧಿಯ ಒಪ್ಪಂದಗಳನ್ನು ಹೊಂದಿಲ್ಲ;

(iii) ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತಗಳು ಇರಲಿಲ್ಲ.

(iv)

ಎ) ನಿರ್ವಹಣೆಯು ತನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಯಾವುದೇ ಹಣವನ್ನು ಮುಂಗಡಗೊಳಿಸಲಾಗಿಲ್ಲ ಇಲ್ಲವೆ, ಸಾಲ ಅಥವಾ ಹೂಡಿಕೆ (ಎರವಲು ಪಡೆದ ನಿಧಿಗಳು ಅಥವಾ ಷೇರು ಪ್ರೀಮಿಯಂ ಅಥವಾ ಯಾವುದೇ ಇತರ ಮೂಲಗಳು ಅಥವಾ ರೀತಿಯ ನಿಧಿಗಳಿಂದ) ಎಂದು ಪ್ರತಿನಿಧಿಸುತ್ತದೆ. ಕಂಪನಿಯಿಂದ ಅಥವಾ ವಿದೇಶಿ ಘಟಕಗಳು ("ಮಧ್ಯವರ್ತಿಗಳು") ಸೇರಿದಂತೆ ಯಾವುದೇ ಇತರ ವ್ಯಕ್ತಿ(ಗಳು) ಅಥವಾ ಘಟಕ(ಗಳು) ತಿಳುವಳಿಕೆಯೊಂದಿಗೆ, ಲಿಖಿತವಾಗಿ ಅಥವಾ ಇನ್ಯಾವುದೇ ರೀತಿಯಲ್ಲಿ ದಾಖಲಿಸಲಾಗಿದೆ, ಮಧ್ಯವರ್ತಿ ನೇರವಾಗಿ ಅಥವಾ ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಘಟಕಗಳಿಗೆ ಪರೋಕ್ಷವಾಗಿ ಸಾಲ ನೀಡಿ ಅಥವಾ ಹೂಡಿಕೆ ಮಾಡಿ ಅಥವಾ ಪರವಾಗಿ ಕಂಪನಿಯ ("ಅಂತಿಮ ಫಲಾನುಭವಿಗಳು") ಅಥವಾ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಹಾಗೆ ಒದಗಿಸಿ ಅಂತಿಮ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ.

ಬಿ. ಕಂಪನಿಯು ತನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿ ಯಾವುದೇ ಹಣವನ್ನು ಸ್ವೀಕರಿಸಿಲ್ಲ ಎಂದು ಪ್ರತಿನಿಧಿಸುತ್ತದೆ. ವಿದೇಶಿ ಘಟಕಗಳು ("ಹಣಕಾಸು ಪಕ್ಷಗಳು") ಸೇರಿದಂತೆ ಯಾವುದೇ ವ್ಯಕ್ತಿ(ಗಳು) ಅಥವಾ ಘಟಕ(ಗಳು) ನಿಂದ ಕಂಪನಿಯಿಂದ ಕಂಪನಿಯು ನೇರವಾಗಿ ಅಥವಾ ಪರೋಕ್ಷವಾಗಿ ಸಾಲವನ್ನು ನೀಡುತ್ತದೆ ಎಂದು ಲಿಖಿತವಾಗಿ ಅಥವಾ ಇನ್ಯಾವುದೇ ರೀತಿಯಲ್ಲಿ ದಾಖಲಿಸಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅಥವಾ ನಿಧಿಯ ಪರವಾಗಿ ಅಥವಾ ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಘಟಕಗಳಲ್ಲಿ ಹೂಡಿಕೆ ಮಾಡಿ ಪಕ್ಷಗಳು ("ಅಂತಿಮ ಫಲಾನುಭವಿಗಳು") ಅಥವಾ ಅಲ್ಟಿಮೇಟ್ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಒದಗಿಸುತ್ತದೆ.

ಸಿ. ಸಮಂಜಸ ಮತ್ತು ಸೂಕ್ತವೆಂದು ಪರಿಗಣಿಸಲಾದ ಆಡಿಟ್ ಕಾರ್ಯವಿಧಾನಗಳ ಆಧಾರದ ಮೇಲೆ ಸಂದರ್ಭಗಳು, ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. ಅದರ ಅಡಿಯಲ್ಲಿ ಪ್ರಾತಿನಿಧ್ಯಗಳನ್ನು ನಾವು ನಂಬುವಂತೆ ಮಾಡಿದೆ. ಮೇಲಿನ (ಎ) ಮತ್ತು (ಬಿ) ಅಡಿಯಲ್ಲಿ ಒದಗಿಸಿದಂತೆ ನಿಯಮ 11 (ಇ) ನ ಉಪ ಷರತ್ತು (೧) ಮತ್ತು (೨) ಯಾವುದೇ ವಸ್ತು ತಪ್ಪು ಹೇಳಿಕೆಯನ್ನು ಒಳಗೊಂಡಿರುತ್ತದೆ.

v) 23–24 ರ ಆರ್ಥಿಕ ವರ್ಷದಲ್ಲಿ ಕಂಪನಿಯು ಯಾವುದೇ ಲಾಭಾಂಶವನ್ನು ಘೋಷಿಸಿಲ್ಲ. ಆದ್ದರಿಂದ ನಿಯಮ 11 ರ ಷರತ್ತು (ಎಫ್) ಅನ್ವಯಿಸುವುದಿಲ್ಲ.

vi) ಪರೀಕ್ಷಾ ತಪಾಸಣೆಗಳನ್ನು ಒಳಗೊಂಡಿರುವ ನಮ್ಮ ಪರೀಕ್ಷೆಯ ಆಧಾರದ ಮೇಲೆ, ಕಂಪನಿಯು ಲೆಕ್ಕಪತ್ರ ಸಾಫ್ಟ್‌ವೇರ್ ಅನ್ನು ಬಳಸಿದೆ. ಅದರ ಲೆಕ್ಕಪತ್ರಗಳನ್ನು ನಿರ್ವಹಿಸಿ. ರೆಕಾರ್ಡಿಂಗ್ ಆಡಿಟ್ ಟ್ರಯಲ್ (ಎಡಿಟ್ ಲಾಗ್) ಸೌಲಭ್ಯದ ವೈಶಿಷ್ಟ್ಯವನ್ನು ಸಕ್ರಿಯಗೊಳಿಸಲಾಗಿದೆ.

ಐ. ಕಾಯ್ದೆಯ ಸೆಕ್ಷನ್ 197(16) ಅಡಿಯಲ್ಲಿ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ: ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ 15 ಜೂನ್ 2015 ರ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 463 (ಇ) ಗೆ ಅನುಸಾರವಾಗಿ ಭಾರತ ಸರ್ಕಾರಿ ಕಂಪನಿಯಾಗಿರುವ ಕಾರಣ ಕಂಪನಿಗಳ ಕಾಯ್ದೆ 2013ರ ನಿಬಂಧನೆಗಳು ಸೆಕ್ಷನ್ 197(16) ಕಂಪನಿಗೆ ಅನ್ವಯಿಸುವುದಿಲ್ಲ.

**ನಾಗಾ & ಅಸೋಸಿಯೇಟ್ಸ್ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ. 012824S

**ಸಹಿ/–**
**(ಸಿಎ ಶರತ್ ಕುಮಾರ್ ಎ)**
**ಪಾಲುದಾರ ಸದಸ್ಯತ್ವ ಸಂಖ್ಯೆ. 273354**

**ಸ್ಥಳ: ಬೆಂಗಳೂರು**
**ದಿನಾಂಕ: 14 ಅಕ್ಟೋಬರ್ 2024**

**ಗಮನಿಸಿ:** ಪ್ರಮಾಣಪತ್ರ UDINಅನ್ನು ಬಳಸಿಕೊಂಡು ಈ ವರದಿಯ ದೃಢೀಕರಣವನ್ನು ಪೋರ್ಟಲ್ https://udin.icai.org/search-udinನಲ್ಲಿ ಪರಿಶೀಲಿಸಬಹುದು.

# ಅನುಬಂಧ–ಎ 1 ರಲ್ಲಿ ಉಲ್ಲೇಖಿಸಲಾದ "ಇತರ ಕಾನೂನು ಮತ್ತು ನಿಯಮಿತ ಅವಶ್ಯಕತೆಗಳ ಕುರಿತು ವರದಿ" ಎಂಬ ಶೀರ್ಷಿಕೆಯಡಿಯಲ್ಲಿ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ ಸದಸ್ಯರಿಗೆ ನಮ್ಮ ವರದಿ

(i) (ಎ) ಕಂಪನಿಯು ಯಾವುದೇ ಆಸ್ತಿ, ಸ್ಥಾವರ ಮತ್ತು ಸಲಕರಣೆಗಳನ್ನು ಹೊಂದಿರುವುದಿಲ್ಲ;

(ಬಿ) ಕಂಪನಿಯು ಯಾವುದೇ ಅಮೂರ್ತ ಸ್ವತ್ತುಗಳನ್ನು ಹೊಂದಿರುವುದಿಲ್ಲ;

(ii) (ಎ) ಕಂಪನಿಯು ಯಾವುದೇ ದಾಸ್ತಾನುಗಳನ್ನು ಹೊಂದಿಲ್ಲ ಮತ್ತು ಅದರ ಪ್ರಕಾರ, ಆದೇಶದ ಷರತ್ತು 3(ii)ನ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

(ಬಿ) ಕಂಪನಿಯು ಪ್ರಸ್ತುತ ಸ್ವತ್ತುಗಳ ಭದ್ರತೆಯ ಆಧಾರದ ಮೇಲೆ ಬ್ಯಾಂಕ್ ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಒಟ್ಟಾರೆಯಾಗಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಯಾವುದೇ ಕಾರ್ಯ ಬಂಡವಾಳದ ಮಿತಿಗಳನ್ನು ಮಂಜೂರು ಮಾಡಿರುವುದಿಲ್ಲ;

(iii) ಕಂಪನಿಯು ಯಾವುದೇ ಹೂಡಿಕೆಗಳನ್ನು ಮಾಡಿಲ್ಲ. ಯಾವುದೇ ಗ್ಯಾರಂಟಿ ಅಥವಾ ಭದ್ರತೆಯನ್ನು ಒದಗಿಸಿಲ್ಲ ಅಥವಾ ಸಾಲಗಳ ಸ್ವರೂಪದಲ್ಲಿ ಯಾವುದೇ ಸಾಲಗಳು ಅಥವಾ ಮುಂಗಡಗಳನ್ನು ನೀಡಿಲ್ಲ. ಸುರಕ್ಷಿತ ಅಥವಾ ಅಸುರಕ್ಷಿತ, ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಯಾವುದೇ ಇತರ ಪಕ್ಷಗಳನ್ನು ಹೊಂದಿರುವುದಿಲ್ಲ;

(iv) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ, ನಿಬಂಧನೆಗಳಲ್ಲಿ ಉಲ್ಲೇಖಿಸಿದಂತೆ ಕಂಪನಿಯು ಯಾವುದೇ ಸಾಲವನ್ನು ನೀಡಿಲ್ಲ. ಕಾಯ್ದೆಯ ಸೆಕ್ಷನ್ 185 ಮತ್ತು 186 ರ ಮತ್ತು ನಿಬಂಧನೆಗಳಲ್ಲಿ ಉಲ್ಲೇಖಿಸಿದಂತೆ ಯಾವುದೇ ಹೂಡಿಕೆಗಳಿಲ್ಲ, ಯಾವುದೇ ಖಾತರಿಗಳನ್ನು ನೀಡಲಾಗಿಲ್ಲ ಮತ್ತು ಯಾವುದೇ ಭದ್ರತೆಗಳಿಲ್ಲ.

(v) ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ನಿರ್ದೇಶನಗಳು ಮತ್ತು ಸೆಕ್ಷನ್ 73 ರಿಂದ 76 ರ ನಿಬಂಧನೆಗಳು ಅಥವಾ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ರಚಿಸಲಾದ ಯಾವುದೇ ಇತರ ನಿಬಂಧನೆಗಳ ಅಡಿಯಲ್ಲಿ ಅನ್ವಯವಾಗುವಂತೆ ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ. ಅದರಂತೆ, ಸದರಿ ಆದೇಶದ ಕಲಂ 3(v) ನ ನಿಬಂಧನೆಗಳು ಅನ್ವಯಿಸುವುದಿಲ್ಲ;

(vi) ನಮಗೆ ತಿಳಿದಿರುವಂತೆ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಉತ್ಪನ್ನಗಳಿಗೆ ಕಂಪನಿಗಳ ಕಾಯ್ದೆ 148 ರ ಉಪ–ವಿಭಾಗ (1) ರ ಷರತ್ತು (ಡಿ) ಅಡಿಯಲ್ಲಿ ಕೇಂದ್ರ ಸರ್ಕಾರವು ವೆಚ್ಚದ ದಾಖಲೆಗಳ ನಿರ್ವಹಣೆಯನ್ನು ಸೂಚಿಸಿಲ್ಲ. ಅದರಂತೆ, ಸದರಿ ಆದೇಶದ ಕಾಲಂ 3(vi) ನಿಬಂಧನೆಗಳು ಅನ್ವಯಿಸುವುದಿಲ್ಲ;

(vii) ಕಂಪನಿಯ ದಾಖಲೆಗಳ ಪ್ರಕಾರ, ಕಂಪನಿಯು ಸಾಮಾನ್ಯವಾಗಿ ಮಾರ್ಚ್ 31, 2024 ರಂತೆ ಶಾಸನಬದ್ಧ ಬಾಕಿಗಳನ್ನು ಠೇವಣಿ ಮಾಡುವಲ್ಲಿ ನಿಯಮಿತವಾಗಿರುತ್ತದೆ;

(viii) ಖಾತೆಯ ಪುಸ್ತಕಗಳಲ್ಲಿ ದಾಖಲಿಸಲಾದ ಎಲ್ಲಾ ವಹಿವಾಟುಗಳನ್ನು ಆದಾಯ ತೆರಿಗೆ ಕಾಯ್ದೆ, 1961 (1961 ರ 43) ಅಡಿಯಲ್ಲಿ ಸಂಬಂಧಿಸಿದ ತೆರಿಗೆ ಮೌಲ್ಯಮಾಪನಗಳಲ್ಲಿ ಆದಾಯ ಎಂದು ಸರಿಯಾಗಿ ಬಹಿರಂಗಪಡಿಸಲಾಗಿದೆ;

(ix) (ಎ) ಆಯವ್ಯಯ ದಿನಾಂಕದಂದು ಕಂಪನಿಯು ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಯಾವುದೇ ಹಣವನ್ನು ಎರವಲು ಪಡೆದಿರುವುದಿಲ್ಲ;

(ಬಿ) ಕಂಪನಿಯು ತನ್ನ ಅಂಗಸಂಸ್ಥೆಗಳು, ಜಂಟಿ ಉದ್ಯಮಗಳು ಅಥವಾ ಸಹವರ್ತಿ ಕಂಪನಿಗಳಲ್ಲಿ ಹೊಂದಿರುವ ಭದ್ರತೆಗಳ ಪ್ರತಿಜ್ಞೆಯ ಮೇಲೆ ವರ್ಷದಲ್ಲಿ ಯಾವುದೇ ಸಾಲಗಳನ್ನು ಸಂಗ್ರಹಿಸಿಲ್ಲ;

(x) (ಎ) ಕಂಪನಿಯು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಆಧಾರದ ಮೇಲೆ ನಮ್ಮ ಅಭಿಪ್ರಾಯದಲ್ಲಿ ಇದು ವರ್ಷದಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಹೆಚ್ಚಿನ ಸಾರ್ವಜನಿಕ ಕೊಡುಗೆಯ ಮೂಲಕ ಯಾವುದೇ ಹಣವನ್ನು (ಸಾಲ ಉಪಕರಣಗಳು ಮತ್ತು ಅವಧಿ ಸಾಲಗಳು ಸೇರಿದಂತೆ) ಸಂಗ್ರಹಿಸಿಲ್ಲ.

(ಬಿ) ಕಂಪನಿಯು ಪರಿಶೀಲನೆಯಲ್ಲಿರುವ ವರ್ಷದಲ್ಲಿ ಯಾವುದೇ ಆದ್ಯತೆಯ ಹಂಚಿಕೆ ಅಥವಾ ಷೇರುಗಳ ಖಾಸಗಿ ನಿಯೋಜನೆ ಅಥವಾ ಸಂಪೂರ್ಣ ಅಥವಾ ಭಾಗಶಃ ಪರಿವರ್ತಿಸಬಹುದಾದ ಸಾಲಪತ್ರಗಳನ್ನು ಮಾಡಿರುವುದಿಲ್ಲ;

(xi) (ಎ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ, ಕಂಪನಿಯು ಯಾವುದೇ ವಂಚನೆಗಳನ್ನು ವರದಿ ಮಾಡಿಲ್ಲ ಅಥವಾ ಅದರ ಅಧಿಕಾರಿಗಳು ಅಥವಾ ಉದ್ಯೋಗಿಗಳಿಂದ ಕಂಪನಿಯ ಮೇಲೆ ಯಾವುದೇ ವಂಚನೆಯನ್ನು ವರ್ಷದಲ್ಲಿ ಗಮನಿಸಲಾಗಿಲ್ಲ ಅಥವಾ ವರದಿ ಮಾಡಿಲ್ಲ;

(ಬಿ) ಕಂಪನಿಗಳ (ಆಡಿಟ್ ಮತ್ತು ಆಡಿಟರ್ಸ್) ನಿಯಮಗಳು, 2014 ರ ನಿಯಮ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ನಿಗದಿಪಡಿಸಿದಂತೆ ಫಾರ್ಮ್ ಎಡಿಟಿ–4 ರಲ್ಲಿ ಲೆಕ್ಕಪರಿಶೋಧಕರಿಂದ ಕಂಪನಿ ಕಾಯ್ದೆಯ ಸೆಕ್ಷನ್ 143 (12) ಅಡಿಯಲ್ಲಿ ಯಾವುದೇ ವರದಿಗಳಿಲ್ಲ;

(ಸಿ) ಲೆಕ್ಕಪರಿಶೋಧಕರಿಂದ ಯಾವುದೇ Wistle Blower ದೂರುಗಳು ಬಂದಿರುವುದಿಲ್ಲ,

(xii) ಕಂಪನಿಯು ನಿಧಿ ಕಂಪನಿಯಲ್ಲ. ಅದರಂತೆ, ಸದರಿ ಆದೇಶದ ಕಲಂ 3(xii) ನ ನಿಬಂಧನೆಗಳು ಅನ್ವಯಿಸುವುದಿಲ್ಲ;

(xiii) ಕಂಪನಿಯು ಆಯವ್ಯಯ ದಿನಾಂಕದಂದು ಸಂಬಂಧಿತ ಪಕ್ಷಗಳೊಂದಿಗೆ ಯಾವುದೇ ವಹಿವಾಟುಗಳನ್ನು ಹೊಂದಿರುವುದಿಲ್ಲ.

(xiv) ಕಂಪನಿಯು ಇನ್ನೂ ಕಾರ್ಯಾಚರಣೆಯನ್ನು ಪ್ರಾರಂಭಿಸಿಲ್ಲ ಆದ್ದರಿಂದ ಕಂಪನಿಯು ವರದಿ ಮಾಡುವ ದಿನಾಂಕದಂದು ಯಾವುದೇ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಪರಿಚಯಿಸಿಲ್ಲ;

(xv) ನಿರ್ವಹಣೆಯಿಂದ ನಮಗೆ ಪ್ರತಿನಿಧಿಸಿದಂತೆ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ, ಕಂಪನಿಯು ನಿರ್ದೇಶಕರು ಅಥವಾ ಅವನೊಂದಿಗೆ ಸಂಪರ್ಕ ಹೊಂದಿದ ವ್ಯಕ್ತಿಗಳೊಂದಿಗೆ ಯಾವುದೇ ನಗದುರಹಿತ ವಹಿವಾಟುಗಳನ್ನು ಪ್ರವೇಶಿಸಿಲ್ಲ.

(xvi) ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ, ಕಂಪನಿಯು ಸೆಕ್ಷನ್ 45– ಐಎ ನ ಅಡಿಯಲ್ಲಿ ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್, 1934ರ ಪ್ರಕಾರ, ಆದೇಶದ ಷರತ್ತು 3(xvi) ಕಂಪನಿಗೆ ಅನ್ವಯಿಸುವುದಿಲ್ಲ.

(xvii) ಕಂಪನಿಯು ಹಣಕಾಸು ವರ್ಷದಲ್ಲಿ 1.39 ಲಕ್ಷ ರೂ.ಗಳ ನಗದು ನಷ್ಟವನ್ನು ಅನುಭವಿಸಿತು. ಹಿಂದಿನ ಆರ್ಥಿಕ ವರ್ಷದಲ್ಲಿ 1.49 ಲಕ್ಷ ರೂ. ನಷ್ಟವಾಗಿತ್ತು.

(xviii) ವರ್ಷದಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ಯಾವುದೇ ರಾಜೀನಾಮೆ ಇಲ್ಲ.

(xix) ಹಣಕಾಸಿನ ಅನುಪಾತಗಳು, ವಯಸ್ಸಾದ ಮತ್ತು ಹಣಕಾಸಿನ ಸ್ವತ್ತುಗಳ ಸಾಕ್ಷಾತ್ಕಾರದ ನಿರೀಕ್ಷಿತ ದಿನಾಂಕಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಪಾವತಿ, ಹಣಕಾಸಿನ ಹೇಳಿಕೆಗಳೊಂದಿಗೆ ಇತರ ಮಾಹಿತಿ, ನಿರ್ದೇಶಕರ ಮಂಡಳಿ ಮತ್ತು ನಿರ್ವಹಣಾ ಯೋಜನೆಗಳ ಲೆಕ್ಕಪರಿಶೋಧಕನ ಜ್ಞಾನದ ಆಧಾರದ ಮೇಲೆ, ಲೆಕ್ಕಪರಿಶೋಧಕನು ಲೆಕ್ಕಪರಿಶೋಧನಾ ವರದಿಯ ದಿನಾಂಕದಂದು ಯಾವುದೇ ವಸ್ತು ಅನಿಶ್ಚಿತತೆ ಅಸ್ತಿತ್ವದಲ್ಲಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಆಯವ್ಯಯ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಬಾಕಿ ಬಿದ್ದಾಗ ಮತ್ತು ಆಯವ್ಯಯದ ದಿನಾಂಕದಂದು ಅಸ್ತಿತ್ವದಲ್ಲಿರುವ ತನ್ನ ಹೊಣೆಗಾರಿಕೆಗಳನ್ನು ಪೂರೈಸಲು ಕಂಪನಿಯು ಸಮರ್ಥವಾಗಿದೆ;

(xx) ಕಂಪನಿಯು ಸಿಎಸ್ಆರ್ ಚಟುವಟಿಕೆಗಳ ನಿಬಂಧನೆಗಳ ಅಡಿಯಲ್ಲಿ ಒಳಗೊಳ್ಳುವುದಿಲ್ಲ; ಆದ್ದರಿಂದ ಯಾವುದೇ ಸಿಎಸ್ಆರ್ ಖರ್ಚು ಮಾಡಿಲ್ಲ.

(xxi) ಬ್ಯಾಲೆನ್ಸ್ ಶೀಟ್ ದಿನಾಂಕದಂದು ಕಂಪನಿಯು ಯಾವುದೇ ಅಂಗಸಂಸ್ಥೆ ಕಂಪನಿಗಳನ್ನು ಹೊಂದಿಲ್ಲ. ಆದ್ದರಿಂದ ಈ ಕಂಪನಿಯು ಏಕೀಕೃತ ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸಲು ಯಾವುದೇ ಬಾಧ್ಯತೆಯನ್ನು ಹೊಂದಿಲ್ಲ. ಹಾಗಾಗಿ. ಈ ಷರತ್ತು ಅನ್ವಯಿಸುವುದಿಲ್ಲ.

**ನಾಗಾ & ಅಸೋಸಿಯೇಟ್ಸ್ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ. 012824S

**ಸಹಿ/–**
**(ಸಿಎ ಶರತ್ ಕುಮಾರ್ ಎ)**
**ಪಾಲುದಾರ ಸದಸ್ಯತ್ವ ಸಂಖ್ಯೆ. 273354**

**ಸ್ಥಳ: ಬೆಂಗಳೂರು**
**ದಿನಾಂಕ: 14 ಅಕ್ಟೋಬರ್ 2024**

# ಅನುಬಂಧ–ಬಿ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

31 ಮಾರ್ಚ್ 2024 ಕ್ಕೆ ಕೊನೆಗೊಂಡ ವರ್ಷಕ್ಕೆ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ಯಮಿತ (ಬಿ–ರೈಡ್) ಸದಸ್ಯರಿಗೆ ನಮ್ಮ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಲಾದ ಅನುಬಂಧ.

**ಎ. ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 143(5) ಅಡಿಯಲ್ಲಿ ನಿರ್ದೇಶನಗಳು**

| ಕ್ರಮ ಸಂಖ್ಯೆ | ನಿರ್ದೇಶನಗಳು | ಟೀಕೆಗಳು |
|---|---|---|
| 1 | ಐಟಿ ವ್ಯವಸ್ಥೆಯ ಮೂಲಕ ಎಲ್ಲಾ ಲೆಕ್ಕಪತ್ರ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿದೆಯೇ? ಹೌದು ಎಂದಾದರೆ, ತಂತ್ರಾಂಶ ವ್ಯವಸ್ಥೆಯ ಬಾಹ್ಯ ಲೆಕ್ಕಪರಿಶೋಧಕ ವಹಿವಾಟುಗಳ ಪ್ರಕ್ರಿಯೆಯ ಪರಿಣಾಮಗಳು ಖಾತೆಗಳ ಸಮಗ್ರತೆಯ ಮೇಲೆ ಹಣಕಾಸಿನ ಪರಿಣಾಮಗಳ ಜತೆಗೆ ಯಾವುದಾದರೂ ಇದ್ದರೆ, ತಿಳಿಸಬಹುದು. | ಕಂಪನಿಯು ತನ್ನ ಎಲ್ಲಾ ಲೆಕ್ಕಪತ್ರ ವ್ಯವಹಾರಗಳನ್ನು ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್‌ನಲ್ಲಿ ನಿರ್ವಹಿಸುತ್ತದೆ. ಆದರೆ ಟ್ಯಾಲಿ ಸಾಫ್ಟ್‌ವೇರ್‌ನಲ್ಲಿ ತಿದ್ದುಪಡಿ, ಅಳಿಸುವಿಕೆ ಮತ್ತು ನಮೂದುಗಳ ಸೇರಿಸಿಯನ್ನು ಎಲ್ಲಾ ಬಳಕೆದಾರರ ನಿರ್ವಾಹಕರಿಗೆ ಪ್ರವೇಶವನ್ನು ನೀಡಿದ ಕಾರಣದಿಂದ ಲೆಕ್ಕಪತ್ರ ನಿರ್ವಹಣೆಯ ಉಸ್ತುವಾರಿ ಹೊಂದಿರುವ ವ್ಯಕ್ತಿಯ ಅನುಮತಿಯಿಲ್ಲದೆ ಮಾಡಬಹುದು ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ. ಭದ್ರತಾ ನಿಯಂತ್ರಣಗಳ ಅಡಿಯಲ್ಲಿ ಕಂಪನಿಯು ಇನ್ನೂ ಬಳಕೆದಾರರ ಪಾತ್ರಗಳನ್ನು (ಅಂದರೆ ಪ್ರವೇಶ/ ಮೌಲ್ಯಮಾಪನ/ ಅನುಮೋದಕ) ಕಾರ್ಯಗತಗೊಳಿಸಬೇಕಾಗಿದೆ. |
| 2 | ಯಾವುದೇ ಸಾಲದ ಪುನರ್ ರಚನೆಯ ಪ್ರಕರಣಗಳು, ಸಾಲ, ಸಾಲ ಮನ್ನಾ ಅಥವಾ ಋಣಭಾರ, ಸಾಲ ಬಡ್ಡಿ ಮನ್ನಾ ಪ್ರಕರಣಗಳಿಲ್ಲ.ಅಸ್ತಿತ್ವದಲ್ಲಿರುವ ಸಾಲದ ಯಾವುದೇ ಪುನರ್ರಚನೆ ಅಥವಾ ಸಾಲವನ್ನು ಮರುಪಾವತಿಸಲು ಕಂಪನಿಯು ಅಸಮರ್ಥತೆಯಿಂದಾಗಿ ಕಂಪನಿಗೆ ಸಾಲದಾತರಿಂದ ಮಾಡಿದ ಸಾಲಗಳು/ಬಡ್ಡಿ ಇತ್ಯಾದಿಗಳನ್ನು ಮನ್ನಾ ಮಾಡುವ ಪ್ರಕರಣಗಳು ಇವೆಯೇ? ಹೌದು ಎಂದಾದರೆ, ಹಣಕಾಸಿನ ಪರಿಣಾಮಗಳನ್ನು ತಿಳಿಸಬಹುದು. ಅಂತಹ ಪ್ರಕರಣಗಳನ್ನು ಸರಿಯಾಗಿ ಲೆಕ್ಕ ಹಾಕಲಾಗಿದೆಯೇ? | ಯಾವುದೇ ಸಾಲ ಅಥವಾ ಮನ್ನಾ ಪ್ರಕರಣಗಳು, ಪುನರ್ ರಚಿಸುವ ಪ್ರಕರಣಗಳು/ಸಾಲಗಳು/ ಸಾಲ ಬಡ್ಡಿ ಮನ್ನಾಗಳು ಇರುವುದಿಲ್ಲ. |
| 3 | ಕೇಂದ್ರ/ ರಾಜ್ಯ ಸರ್ಕಾರ ಅಥವಾ ಅದರ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ನಿಧಿಗಳು (ಅನುದಾನಗಳು/ಸಬ್ಸಿಡಿ ಇತ್ಯಾದಿ) ಸ್ವೀಕರಿಸಲಾಗಿದೆಯೇ ಅಥವಾ ಅದರ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಸರಿಯಾಗಿ ಲೆಕ್ಕ ಹಾಕಲಾಗಿದೆಯೇ/ಬಳಸಲಾಗಿದೆಯೇ? ಉಲ್ಲಂಘನೆ ಮಾಡಿದ ಸಂದರ್ಭಗಳ ಪಟ್ಟಿ ಮಾಡಿ. | ಆಯವ್ಯಯ ದಿನಾಂಕದಂದು ಘಟಕವು ಯಾವುದೇ ಹಣವನ್ನು (ಅನುದಾನ/ಸಬ್ಸಿಡಿ ಇತ್ಯಾದಿ) ಸ್ವೀಕರಿಸಿಲ್ಲ. |

**ಬಿ. ಹೆಚ್ಚುವರಿ ಉಪ ನಿರ್ದೇಶನಗಳು**

I. ಅನುಬಂಧ–1 ರ ಪ್ರಕಾರ ನಗದು ಮತ್ತು ಬ್ಯಾಂಕ್‌ನಲ್ಲಿ ಉಳಿದ ಮೊತ್ತಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕು ಮತ್ತು ನಿರ್ದಿಷ್ಟ ಅನುಸರಣೆಗಳ ಪ್ರಕರಣಗಳನ್ನು ವರದಿ ಮಾಡಬೇಕು. –ಪರಿಶೀಲಿಸಲಾಗಿದೆ ಮತ್ತು ಸರಿಯಾಗಿ ಕಂಡುಬಂದಿದೆ.

II. ದುರುಪಯೋಗ/ವಂಚನೆ ಪ್ರಕರಣಗಳನ್ನು ಎದುರಿಸಲು ಕಂಪನಿಯು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ನಷ್ಟಗಳು ಯಾವುದಾದರೂ ಇದ್ದರೆ, ಖಾತೆಯ ಪುಸ್ತಕಗಳಲ್ಲಿ ಸರಿಯಾಗಿ ಲೆಕ್ಕ ಹಾಕಲಾಗಿದೆಯೇ?– ಪರಿಶೀಲಿಸಲಾಗಿದೆ ಮತ್ತು ಸರಿಯಾಗಿ ಲೆಕ್ಕ ಹಾಕಲಾಗಿದೆ

III. ಅಮಾನತ್ ಲೆಕ್ಕದಡಿಯಲ್ಲಿ ಕಾರ್ಯನಿರ್ವಹಿಸುವ ವಿವರಿಸಲಾಗದ ಬಾಕಿ/ಬಾಕಿ ವಿವರಗಳನ್ನು ಸಹ ಪರಿಶೀಲಿಸಬಹುದು– ಹೌದು ಪರಿಶೀಲಿಸಲಾಗಿದೆ, ಪ್ರತಿಕೂಲ ಪ್ರತಿಕ್ರಿಯೆಗಳಿಲ್ಲ.

IV. ಒಪ್ಪಂದದಲ್ಲಿ ಸೂಚಿಸಲಾದ ಮೈಲುಗಲ್ಲುಗಳಿಗೆ ವಿರುದ್ಧವಾಗಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಅಸ್ತಿತ್ವದಲ್ಲಿದೆಯೇ ಮತ್ತು ವೆಚ್ಚದ ಹೆಚ್ಚಳದ ಪ್ರಭಾವ, ಯಾವುದಾದರೂ ಇದ್ದರೆ, ಒಪ್ಪಂದಗಳಿಂದ ಆದಾಯ/ನಷ್ಟಗಳು ಇತ್ಯಾದಿಗಳನ್ನು ಸರಿಯಾಗಿ ಲೆಕ್ಕಹಾಕಲಾಗಿದೆ– ಇಲ್ಲಿಯವರೆಗೆ ಯಾವುದೇ ಕೆಲಸಗಳನ್ನು ಪ್ರಾರಂಭಿಸಲಾಗಿಲ್ಲ. ಹೀಗಾಗಿ, ಈ ಬಗ್ಗೆ ಪ್ರತಿಕ್ರಿಯಿಸಲು ನಮಗೆ ಸಾಧ್ಯವಾಗಲಿಲ್ಲ.

V. ವ್ಯಾಪಾರ ಕರಾರುಗಳು, ವ್ಯಾಪಾರ ಪಾವತಿಗಳು, ಮುಂಗಡಗಳು ಮತ್ತು ಅಂತಹುದೇ ಬಾಕಿಗಳ ಬಾಕಿಗಳ ದೃಢೀಕರಣದ ಕುರಿತು ಕಾಮೆಂಟ್ ಮಾಡಿ– ಹೌದು. ಪರಿಶೀಲಿಸಲಾಗಿದೆ, ಯಾವುದೇ ಪ್ರತಿಕೂಲ ಪ್ರತಿಕ್ರಿಯೆಗಳಿಲ್ಲ.

## ಅನುಬಂಧ 1ರಿಂದ ಅನುಬಂಧ–ಬಿವರೆಗೆ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

| ಕ್ರಮ ಸಂಖ್ಯೆ | ಪರಿಶೀಲನಾ ಪಟ್ಟಿಯಲ್ಲಿರುವ ವಸ್ತುಗಳು | ಟೀಕೆಗಳು |
|---|---|---|
| 1 | ಎಲ್ಲಾ ಬ್ಯಾಂಕ್ ಖಾತೆಗಳು/ಸ್ಥಿರ ಠೇವಣಿಗಳನ್ನು ಬ್ಯಾಂಕ್‌ಗಳೊಂದಿಗೆ ತೆರೆಯಲಾಗಿದೆಯೇ/ ಮೇಲೆ ಹೇಳಿದ ಅಧಿಕಾರಗಳ ನಿಯೋಗದ ಪ್ರಕಾರ ಸರಿಯಾದ ಅಧಿಕಾರ ಮತ್ತು ಅನುಮೋದನೆ ನೀಡಲಾಗಿದೆಯೇ? | ಹೌದು |
| 2 | ಬ್ಯಾಂಕ್ ಸಮನ್ವಯವನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇದೆಯೇ? ಹೇಳಿಕೆ ಮತ್ತು ಅವುಗಳನ್ನು ಲೆಕ್ಕಪರಿಶೋಧನೆಗಾಗಿ ಪರಿಶೀಲನೆಗಾಗಿ ಹಾಜರುಪಡಿಸಲಾಗಿದೆಯೇ? | ಹೌದು. (ಮಾಸಿಕ ಬಿಆರ್‌ಎಸ್‌ಗಳನ್ನು ತಯಾರಿಸಲಾಗಿದೆ ಮತ್ತು ಆಡಿಟ್ ಪರಿಶೀಲನೆಗೆ ಕಳುಹಿಸಲಾಗಿದೆ) |
| 3 | ಮುಖ್ಯ ಖಾತೆ ಮತ್ತು ಎಲ್ಲಾ ಅಧೀನ ಸಂಸ್ಥೆಗಳ ಬ್ಯಾಂಕ್ ಖಾತೆಗಳನ್ನು ಸಮನ್ವಯ ಮಾಡಲಾಗಿದೆಯೇ? | ಹೌದು |
